ನೀತಿ ಪಾಠಗಳು

ಭಾಗ - 2

ಲೇಖಕರು:

ಕೆ. ಅಬ್ದುಲ್ಲಾ ಹಸನ್

ಪರಮ ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ

ಪ್ರಕಾಶಕರ ಮಾತು

ಜೀವನದ ಪ್ರತಿಯೊಂದು ರಂಗದಲ್ಲಿ ಓರ್ವ ಮುಸ್ಲಿಮನ ಸ್ವಭಾವ ಹೇಗಿರಬೇಕೆಂಬುದನ್ನು ಕುರ್‌ಆನ್ ಮತ್ತು ಪ್ರವಾದಿಚರ್ಯೆಯು ಕಲಿಸುತ್ತದೆ. ಸಚ್ಚರಿತ ಪೂರ್ವಜರ ಜೀವನ ಮಾದರಿಗಳು ಅದನ್ನು ಪ್ರತಿಬಿಂಬಿಸಿವೆ. ಈ ಕೃತಿಯಲ್ಲಿ ಸದ್ಗುಣಗಳ ಸತ್ಪರಿಣಾಮಗಳನ್ನೂ ದುರ್ಗುಣಗಳ ದುಷ್ಪರಿಣಾಮಗಳನ್ನೂ ವಿವರಿಸಲಾಗಿದೆ.

ಒಂದು ಮತ್ತು ಎರಡನೆಯ ತರಗತಿಗಳಲ್ಲಿ ಕಥೆಗಳ ಮೂಲಕ ಈ ಪುಸ್ತಕದಲ್ಲಿರುವ ಹಲವು ವಿಷಯಗಳು ಮಕ್ಕಳಿಗೆ ತಿಳಿದಿರಬಹುದು. ಆದ್ದರಿಂದ ಅವರು ಈ ಪುಸ್ತಕದ ಪಾಠಗಳನ್ನು ಸುಲಭದಲ್ಲಿ ಅರ್ಥಮಾಡಿಕೊಳ್ಳಬಹುದು. ಹಾಗಿದ್ದರೂ ಈ ನಿಟ್ಟಿನಲ್ಲಿ ಅಧ್ಯಾಪಕರ ಪಾತ್ರ ಮುಖ್ಯವಾಗಿದೆ. ಪಾಠಗಳು ದೀರ್ಘವಾದೀತೆಂಬ ಆಶಂಕೆಯಿಂದ ಚರಿತ್ರೆಯ ಹಲವು ಆವಶ್ಯಕ ಘಟನೆಗಳನ್ನು ಇದರಲ್ಲಿ ಸೇರಿಸಿಲ್ಲ. ಕೆಲವು ಘಟನೆಗಳನ್ನು ಸಂಕ್ಷಿಪ್ತವಾಗಿ ತಿಳಿಸಲಾಗಿದೆ. ಅಂತಹ ಘಟನೆಗಳನ್ನು ವಿವರವಾಗಿ ತಿಳಿಸಿ ಮಕ್ಕಳು ಅವುಗಳನ್ನು ಅನುಸರಿಸುವಂತೆ ಪ್ರೇರೇಪಿಸಿ, ಇಸ್ಲಾಮೀ ಸಂಸ್ಕೃತಿಯ ಬಗ್ಗೆ ಹೆಮ್ಮೆ ಪಡುವಂತೆ ಮಾಡಬೇಕಾದುದು ಅಧ್ಯಾಪಕರ ಕರ್ತವ್ಯವಾಗಿದೆ.

ಕೆಲವು ಪಾಠಗಳು ಸ್ವಲ್ಪ ದೀರ್ಘವಾಗಿವೆ. ಆದರೂ ಕಥಾರೂಪದಲ್ಲಿ ಘಟನೆಗಳ ವಿವರಣೆಯಿರುವುದರಿಂದ ಅವು ನೀರಸವೆನಿಸಲಾರವು. ಪಾಠಗಳ ಕೊನೆಯಲ್ಲಿ ಮಾದರಿ ಪ್ರಶ್ನೆಗಳನ್ನು ನೀಡಲಾಗಿದೆ. ಪಾಠಕ್ಕೆ ಸಂಬಂಧಿಸಿದ ಹೆಚ್ಚಿನ ಪ್ರಶ್ನೆಗಳನ್ನು ಅಧ್ಯಾಪಕರೇ ಸಿದ್ಧಪಡಿಸಬೇಕು.

ಇಸ್ಲಾಮೀ ಸಂಸ್ಕೃತಿಯನ್ನು ರೂಢಿಸುವ ನವಪೀಳಿಗೆಯ ಬೆಳವಣಿಗೆಗೆ ಈ ಕೃತಿ ಸಹಾಯಕವಾಗಲೆಂದು ಹಾರೈಸುತ್ತೇವೆ.

ಶಾಂತಿ ಪ್ರಕಾಶನ

ಅನುಕ್ರಮಣಿಕೆ

1
ದೇವಭಕ್ತಿ (ತಕ್ವಾ)

ದೇವಭಕ್ತಿ ಎಂದರೇನು? ಅಲ್ಲಾಹನೊಂದಿಗೆ ಪ್ರೀತಿ-ಗೌರವ. ಆತನು ಸದಾ ನಮ್ಮನ್ನು ನೋಡುತ್ತಿದ್ದಾನೆಂಬ ನಂಬಿಕೆ. ಆತನು ದ್ವೇಷಿಸುವನೋ ಕೋಪಿಸುವನೋ ಎಂಬ ಭೀತಿ. ಆತನ ಶಿಕ್ಷೆಯ ಭಯ. ಆತನ ಮುಂದೆ ಉತ್ತರಿಸಬೇಕಾದೀತೆಂಬ ಚಿಂತೆ. ಆತನ ಮೆಚ್ಚುಗೆ ಗಳಿಸುವ ಹಂಬಲ. ಇವು ದೇವಭಕ್ತಿಯಲ್ಲಿ ಸೇರಿವೆ. ಅದನ್ನು 'ತಕ್ವಾ' ಎಂದು ಹೇಳುತ್ತಾರೆ.

ಶ್ರೇಷ್ಠರಾದ ಉಮರ್ ಫಾರೂಕ್‌ರ(ರ) ಬಗ್ಗೆ ನೀವು ಅರಿತಿದ್ದೀರಿ. ಅವರು ಒಮ್ಮೆ ಉಬಯ್ಯ್ ಬಿನ್ ಕಲಬ್ ಎಂಬ ಸಹಾಬಿಯೊಡನೆ ಕೇಳಿದರು: "ತಕ್ವಾ ಎಂದರೇನು?"

ಉಬಯ್ಯ್(ರ) ಮರು ಪ್ರಶ್ನೆ ಹಾಕಿದರು: "ನೀವು ಮುಳ್ಳು ತುಂಬಿದ ಹಾದಿಯಲ್ಲಿ ನಡೆದಿದ್ದೀರಾ?"

"ಹೌದು."

"ಆಗ ನೀವು ಏನು ಮಾಡುತ್ತೀರಿ?"

"ಉಟ್ಟ ವಸ್ತ್ರವನ್ನು ಸೇರಿಸಿ ಹಿಡಿದು ಮುಳ್ಳು ತಾಗದಂತೆ ಜಾಗ್ರತೆಯಿಂದ ನಡೆಯುತ್ತೇನೆ."

ಅದುವೇ "ತಕ್ವಾ" ಎಂದು ಉಬಯ್ಯ್(ರ) ಹೇಳಿದರು.

ಉಬಯ್ಯ್(ರ) ಹೇಳಿದ್ದು ನಿಮಗೆ ಅರ್ಥವಾಯಿತೇ? ನಮ್ಮ ಜೀವನವೆಂಬ ಹಾದಿಯಲ್ಲಿ ಮುಳ್ಳುಗಳು ತುಂಬಿಕೊಂಡಿವೆ. ನಾನಾರೂಪ ಮತ್ತು ಗಾತ್ರದ ಮುಳ್ಳುಗಳು! ಅಹಂಕಾರ, ಅಸೂಯೆ, ಸುಳ್ಳು, ಮೋಸ ಮುಂತಾದ ದುರ್ಗುಣಗಳು. ಅವು ನಮ್ಮ ಹಾದಿಯಲ್ಲಿರುವ ಮುಳ್ಳುಗಳು. ಅಜಾಗ್ರತೆಯಿಂದ ನಡೆದರೆ ಅವು ನಮ್ಮನ್ನು ಕೆಡಿಸುತ್ತವೆ. ಅಪಾಯಕ್ಕೀಡು ಮಾಡುತ್ತವೆ. ಆದ್ದರಿಂದ ಬಹಳ ಎಚ್ಚರಿಕೆಯಿಂದ ನಡೆಯಬೇಕು. ಜೀವನವೆಂಬ ಹಾದಿಯಲ್ಲಿ ಜಾಗ್ರತೆಯಿಂದ ಕಾಲಿರಿಸಬೇಕು. ಇದುವೇ ಉಬಯ್ಯ್‌ರ(ರ) ಮಾತಿನ ಅರ್ಥ.

ಹಾಗಿದ್ದರೂ ಇಸ್ಲಾಮಿನ ಹಾದಿಯು ಇಕ್ಕಟ್ಟಾಗಿದೆಯೆಂದು ಭಾವಿಸಬಾರದು. ಮಾನವರಿಗೆ ಆವಶ್ಯಕವಾದ ಎಲ್ಲ ಉತ್ತಮ ಕಾರ್ಯಗಳನ್ನೂ ಅಲ್ಲಾಹನು ನಮಗೆ

ಅನುಮತಿಸಿದ್ದಾನೆ. ಹಾನಿಕರವಾದ ಎಲ್ಲ ಕಾರ್ಯಗಳನ್ನೂ ನಿಷೇಧಿಸಿದ್ದಾನೆ. ನಿಷೇಧಿಸಿದ ಕಾರ್ಯವನ್ನು ತೊರೆದರೆ ತಕ್ವಾದ ಅರ್ಧಾಂಶವಾಯಿತು. ಅಲ್ಲಾಹನು ಮೆಚ್ಚಿದ ಕಾರ್ಯಗಳನ್ನು ಮಾಡಿದರೆ 'ತಕ್ವಾ' ಪೂರ್ಣವಾಯಿತು.

ತಕ್ವಾದಿಂದ ಅಲ್ಲಾಹನ ಸ್ಮರಣೆಯು ಮನದಲ್ಲಿ ಸದಾ ಉಳಿಯುತ್ತದೆ. ಅದಲ್ಲದೇ ತಕ್ವಾ, ಎಲ್ಲ ಸದ್ಗುಣಗಳ ಮೂಲವೂ ಆಗಿದೆ. ತಕ್ವಾದ ಪ್ರೇರಣೆ ನೀಡುವ ಅನೇಕ ವಾಕ್ಯಗಳು ಪವಿತ್ರ ಕುರ್‌ಆನಿನಲ್ಲಿವೆ. ಒಂದೆರಡು ಉದಾಹರಣೆಗಳನ್ನು ನೋಡಿರಿ:

وَاتَّقُوا اللّٰهَ وَاعْلَمُوْٓا اَنَّ اللّٰهَ مَعَ الْمُتَّقِيْنَ ﴿١٩٤﴾

"ಅಲ್ಲಾಹನನ್ನು ಭಯಪಡಿರಿ. ಅಲ್ಲಾಹನು ಸೀಮೋಲ್ಲಂಘನೆಯನ್ನು ಮಾಡದವರೊಂದಿಗೆ ಮಾತ್ರವಿರುತ್ತಾನೆಂಬುದನ್ನು ನೀವು ತಿಳಿದಿರಬೇಕು."

(ಅಲ್ ಬಕರಃ : 194)

وَاتَّقُوا اللّٰهَ وَاعْلَمُوْٓا اَنَّكُمْ مُّلٰقُوْهُ

"ಅಲ್ಲಾಹನನ್ನು ಭಯಪಡಿರಿ. ನೀವು (ಮರಣದ ಬಳಿಕ) ಆತನನ್ನು ಭೇಟಿಯಾಗಲಿರುವಿರೆಂದು ಅರಿತುಕೊಳ್ಳಿರಿ."

(ಅಲ್ ಬಕರಃ : 223)

ಮಾನವನು, ಹೊರಗೆ ನಾನಾ ರೀತಿಯ ಸೋಗು ಹಾಕಬಹುದು. ಆತನನ್ನು ನೋಡಿ ಜನರು ಮಹಾಭಕ್ತ(ಮುತ್ತಕೀ)ನೆಂದೂ ಭಾವಿಸಬಹುದು. ಆದರೆ ಅವನು ನಿಜವಾದ ಭಕ್ತನೋ ಎಂಬುದನ್ನು ಅಲ್ಲಾಹನೇ ಬಲ್ಲನು. ಏಕೆಂದರೆ, ತಕ್ವಾ ಮನಸ್ಸಿನಲ್ಲಿರುತ್ತದೆ. ಪ್ರವಾದಿವರ್ಯರು(ಸ) ಎದೆಯನ್ನು ತೋರಿಸುತ್ತಾ, ಹೀಗೆ ಹೇಳಿದ್ದರು: "ತಕ್ವಾ ಇಲ್ಲಿದೆ, ತಕ್ವಾ ಇಲ್ಲಿದೆ, ತಕ್ವಾ ಇಲ್ಲಿದೆ."

ಆದರೆ ಮನದಲ್ಲಿರುವ ತಕ್ವಾವು ವರ್ತನೆಯಲ್ಲಿ ಕಂಡು ಬರುತ್ತದೆ. ಉಮರ್ ಫಾರೂಕ್‌ರ(ರ) ಕಾಲದಲ್ಲಿ ಓರ್ವ ಮಹಿಳೆಯು ಹಾಲಿಗೆ ನೀರು ಸೇರಿಸ ಹೊರಟ ಕಥೆಯನ್ನು ನೀವು ಕೇಳಿದ್ದೀರಲ್ಲವೇ. ನಡುರಾತ್ರೆ! ಯಾರೂ ನೋಡುವವರಿಲ್ಲ. ತಾಯಿ, ಮಗಳೊಡನೆ ಹೇಳುತ್ತಾಳೆ, ಹಾಲಿಗೆ ನೀರು ಸೇರಿಸು. ಆಗ ಮಗಳು ಹೇಳುತ್ತಾಳೆ: "ಅಮ್ಮಾ, ಅದನ್ನು ಅಮೀರುಲ್ ಮೂಮಿನೀನ್ ನಿಷೇಧಿಸಿದ್ದಾರಲ್ಲವೇ?"

"ಅಮೀರುಲ್ ಮೂಮಿನೀನ್‌ರಿಗೆ ಇದು ತಿಳಿಯುವುದೇ?" ತಾಯಿ ಪ್ರಶ್ನಿಸುತ್ತಾಳೆ.

"ಅಮೀರುಲ್ ಮೂಮಿನೀನ್‌ರಿಗೆ ತಿಳಿಯದಿದ್ದರೂ ಅಲ್ಲಾಹನಿಗೆ ತಿಳಿಯುವುದಿಲ್ಲವೇ?" ಮಗಳ ಉತ್ತರ.

ನೋಡಿದಿರಾ! ಮಗಳ ಮನದಲ್ಲಿ ತಕ್ವಾ ಇತ್ತು. ಎಲ್ಲ ರಹಸ್ಯವನ್ನೂ ಅಲ್ಲಾಹನು ತಿಳಿಯುವನೆಂಬ ನಂಬಿಕೆ. ಆ ನಂಬಿಕೆ ನಡತೆಯಲ್ಲಿ ಪ್ರಕಟವಾಗುತ್ತದೆ.

ಇನ್ನು, ಓರ್ವ ಬಡ ಕುರುಬನ ಕಥೆ ಕೇಳಿ.

ಭಕ್ತಿಯುಳ್ಳ ಓರ್ವ ಕುರುಬನ ಕಥೆ. ಒಮ್ಮೆ ಉಮರ್ ಬಿನ್ ಖತ್ತಾಬ್‌ರು ಮಕ್ಕಾಕ್ಕೆ ಹೊರಟಿದ್ದರು. ದಾರಿಯಲ್ಲಿ ಒಂದೆಡೆ ತಂಗಿದರು. ಆಗ ಓರ್ವ ಕುರುಬ ಸಮೀಪದ ಬೆಟ್ಟದಿಂದ ಇಳಿದು ಬಂದ. ಆತನ ಜತೆಯಲ್ಲಿ ಅನೇಕ ಆಡುಗಳಿದ್ದುವು. ಉಮರ್‌ರು(ರ) ಆತನನ್ನು ಕರೆದು ಕೇಳಿದರು: "ಒಂದು ಆಡನ್ನು ನನಗೆ ಮಾರುವೆಯಾ?"

"ಇವು ನನ್ನ ಆಡುಗಳಲ್ಲ. ಯಜಮಾನರು ಮೇಯಿಸಲಿಕ್ಕೆ ಕೊಟ್ಟಿದ್ದಾರೆ."

"ಯಜಮಾನರೊಡನೆ ಒಂದು ಆಡನ್ನು ತೋಳ ಹಿಡಿಯಿತೆಂದು ಹೇಳಿದರಾಯಿತು!"

"ಹಾಗಾದರೆ ಅಲ್ಲಾಹನು ನೋಡುವುದಿಲ್ಲವೇ?" ಕುರುಬನ ಪ್ರಶ್ನೆ.

ಉಮರ್ ಖತ್ತಾಬ್(ರ) ಅದನ್ನು ಖರೀದಿಸಲಿಕ್ಕಾಗಿ ಕೇಳಿರಲಿಲ್ಲ. ಅವರು ಕುರುಬನ ಪ್ರಾಮಾಣಿಕತೆಯನ್ನು ಪರೀಕ್ಷಿಸ ಬಯಸಿದ್ದರು. ಕುರುಬನ ಉತ್ತರ ಕೇಳಿದಾಗ ಉಮರ್(ರ) ಅತ್ತು ಬಿಟ್ಟರು. ಅವರು ಆ ಕೂಡಲೇ ಕುರುಬನ ಜತೆ ಆತನ ಯಜಮಾನನ ಬಳಿಗೆ ಹೋದರು. ಆತನನ್ನು ಖರೀದಿಸಿ ಸ್ವತಂತ್ರಗೊಳಿಸಿದರು. ತರುವಾಯ ಆತನೊಡನೆ ಹೇಳಿದರು: "ನಿನ್ನ ಆ ಮಾತು ಇಹಲೋಕದಲ್ಲಿ ನಿನಗೆ ವಿಮೋಚನೆ ನೀಡಿದೆ. ಪರಲೋಕದಲ್ಲಿಯೂ ಅದು ನಿನ್ನನ್ನು ವಿಮೋಚನೆಗೊಳಿಸುವುದೆಂದು ಭಾವಿಸುತ್ತೇನೆ."

'ತಕ್ವಾ'ಕ್ಕೆ ಮಾತ್ರ ಪರಲೋಕದಲ್ಲಿ ಮಾನವನನ್ನು ಅಲ್ಲಾಹನ ಶಿಕ್ಷೆಯಿಂದ ವಿಮೋಚನೆಗೊಳಿಸುವ ಸಾಮರ್ಥ್ಯವಿದೆ. ಇಸ್ಲಾಮ್ 'ತಕ್ವಾ'ದ ಮಾರ್ಗವನ್ನು ಕಲಿಸುತ್ತದೆ. ಜೀವನದಲ್ಲಿ ಆ ಮಾರ್ಗವನ್ನು ಅವಲಂಬಿಸಿದವರು ಈ ಲೋಕದಲ್ಲಿಯೂ ಪರಲೋಕದಲ್ಲಿಯೂ ಜಯಶೀಲರಾಗುತ್ತಾರೆ. ಆ ಮಾರ್ಗವನ್ನು ತೊರೆದರೆ? ಈ ಲೋಕದಲ್ಲಿ ಆರಂಭದಲ್ಲಿ ಕೆಲವು ಸುಖಗಳು ದೊರೆಯಲೂ ಬಹುದು. ಆದರೆ ಕೊನೆಯಲ್ಲಿ ದುಃಖ ಅನುಭವಿಸಬೇಕಾದೀತು. ಪರಲೋಕದ ವಿಷಯ ಹೇಳುವುದೇ ಬೇಡ. ಶಾಶ್ವತ ನರಕ. ಧಗಧಗನೆ ಉರಿಯುವ ನರಕ! ಅಲ್ಲಾಹನು ಹೇಳಿದ್ದಾನೆ:

يَاأَيُّهَا الَّذِينَ آمَنُوا قُوا أَنفُسَكُمْ وَأَهْلِيكُمْ نَارًا

"ಸತ್ಯವಿಶ್ವಾಸಿಗಳೇ, ನಿಮ್ಮನ್ನೂ ನಿಮ್ಮ ಕುಟುಂಬದವರನ್ನೂ ನರಕದ ಅಗ್ನಿಯಿಂದ ರಕ್ಷಿಸಿರಿ." (ಅತ್ತಹ್ರೀಮ್ : 6)

ಪ್ರಶ್ನೆಗಳು:

1. ತಕ್ವಾ ಎಂದರೇನು?
2. ತಕ್ವಾದ ಸತ್ಪರಿಣಾಮವೇನು?
3. ತಕ್ವಾದ ಕುರಿತು ಒಂದು ಕುರ್‌ಆನ್ ವಾಕ್ಯವನ್ನು ಅರ್ಥಸಹಿತ ಹೇಳಿರಿ.
4. 'ಮುತ್ತಕೀ'ಯಾಗಲು ಏನು ಮಾಡಬೇಕು?
5. ತಾಯಿ ಹೇಳಿದರೂ ಮಗಳು ಹಾಲಿನಲ್ಲಿ ನೀರು ಸೇರಿಸಲಿಲ್ಲವೇಕೆ?
6. ಸಂದರ್ಭ ಕೊಟ್ಟು ವಿವರಿಸಿರಿ:

a) "ಅಮೀರುಲ್ ಮೂಮಿನೀನ್‌ರಿಗೆ ತಿಳಿಯದಿದ್ದರೆ ಅಲ್ಲಾಹನಿಗೆ ತಿಳಿಯುವುದಿಲ್ಲವೇ?"

b) "ಹಾಗಾದರೆ ಅಲ್ಲಾಹನು ನೋಡುವುದಿಲ್ಲವೇ?"

2

ಸಹೋದರತೆ

ಈ ಲೋಕದಲ್ಲಿ ಮಾನವರನ್ನು ಒಂದುಗೂಡಿಸುವ ಹಲವು ವಿಷಯಗಳಿವೆ. ಕುಟುಂಬವೂ ಅದರಲ್ಲೊಂದು. ಒಂದೇ ಕುಟುಂಬದವರು ಪರಸ್ಪರ ಪ್ರೀತಿ ಸಹಕಾರದಿಂದ ಬಾಳುವುದನ್ನು ನೀವು ನೋಡಿಲ್ಲವೇ?

ಒಂದೇ ದೇಶದವರೂ ಹಾಗೆಯೇ. ದೇಶ ಉದ್ಧಾರವಾಗಬೇಕು. ದೇಶವಾಸಿಗಳಿಗೆ ಹಿತವಾಗಬೇಕು. ಹೀಗೆ ಭಾವಿಸದವರು ವಿರಳ. ಸ್ವಂತ ದೇಶದವರನ್ನು ಇತರರಿಗಿಂತ ಹೆಚ್ಚಾಗಿ ಪ್ರೀತಿಸುವುದೇ ಅದಕ್ಕೆ ಕಾರಣವಲ್ಲವೇ.

ಒಂದೇ ಭಾಷೆಯವರಲ್ಲಿಯೂ ಈ ಪ್ರೀತಿಯಿದೆ. ಆದ್ದರಿಂದಲೇ ನಾವು ಎಲ್ಲಿ ಹೋದರೂ ನಮ್ಮ ಭಾಷೆಯವರನ್ನು ಹುಡುಕುತ್ತೇವೆ.

ಹೀಗೆಯೇ ವಿಶ್ವಾಸವು ಮಾನವರನ್ನು ಜೋಡಿಸುವ ಇನ್ನೊಂದು ಕೊಂಡಿಯಾಗಿದೆ. ಇಸ್ಲಾಮ್ ಧರ್ಮವು ಸತ್ಯವಿಶ್ವಾಸದ ಆಧಾರದಲ್ಲಿರುವ ಪ್ರೀತಿಗೆ ಇತರೆಲ್ಲ ಪ್ರೀತಿಗಿಂತ ಹೆಚ್ಚಿನ ಪ್ರಾಧಾನ್ಯತೆ ನೀಡಿದೆ. ಕುಟುಂಬ, ದೇಶ ಮತ್ತು ಭಾಷೆ ವಿಭಿನ್ನವಾದರೂ ವಿಶ್ವಾಸಿಗಳು ಪರಸ್ಪರ ಸಹೋದರರಾಗಿರುತ್ತಾರೆ. ಕುರ್‌ಆನಿನಲ್ಲಿ ಅಲ್ಲಾಹನು ಹೇಳಿದ್ದಾನೆ:

إِنَّ هَٰذِهِۦٓ أُمَّتُكُمْ أُمَّةً وَٰحِدَةً وَأَنَا۠ رَبُّكُمْ فَٱعْبُدُونِ ﴿٩٢﴾

"ಈ ನಿಮ್ಮ ಸಮುದಾಯವು ವಾಸ್ತವದಲ್ಲಿ ಒಂದೇ ಸಮುದಾಯ ವಾಗಿದೆ ಮತ್ತು ನಾನು ನಿಮ್ಮ ಪ್ರಭುವಾಗಿದ್ದೇನೆ. ಆದುದರಿಂದ ನೀವು ನನ್ನ ದಾಸ್ಯ-ಆರಾಧನೆ ಮಾಡಿರಿ." (ಅಲ್ ಅಂಬಿಯಾ : 92)

ಪವಿತ್ರ ಕುರ್‌ಆನಿನಲ್ಲಿ ಇನ್ನೊಂದೆಡೆ ಹೀಗೆ ಹೇಳಿದೆ:

إِنَّمَا ٱلْمُؤْمِنُونَ إِخْوَةٌ

"ನಿಶ್ಚಯವಾಗಿಯೂ ಸತ್ಯವಿಶ್ವಾಸಿಗಳು ಪರಸ್ಪರ ಸಹೋದರರಾಗಿದ್ದಾರೆ."

(ಅಲ್ ಹುಜುರಾತ್ : 10)

ಇಸ್ಲಾಮಿನ ಆಗಮನಕ್ಕಿಂತ ಮುಂಚೆ ಮಾನವರು ಹಲವು ಬಣಗಳಾಗಿದ್ದರು. ಕುಟುಂಬ, ಗೋತ್ರ, ಜಾತಿ, ಭಾಷೆಗಳ ಹೆಸರಲ್ಲಿ ಪರಸ್ಪರ ಜಗಳಾಡುತ್ತಿದ್ದರು, ಕೊಲ್ಲುತ್ತಿದ್ದರು. ಹೀಗೆ ಜಗಳಾಡುತ್ತಿದ್ದ ಕುಟುಂಬಗಳನ್ನೂ ದೇಶಗಳನ್ನೂ ವರ್ಗಗಳನ್ನೂ ಇಸ್ಲಾಮ್ ಒಂದೇ ವಿಶ್ವಾಸದಲ್ಲಿ ಜೋಡಿಸಿತು. ತಲೆತಲಾಂತರಗಳಿಂದ ವೈರಿಗಳಾಗಿದ್ದವರು ಪರಸ್ಪರ ಆಪ್ತ ಮಿತ್ರರಾದರು. ಅದು ಸತ್ಯವಿಶ್ವಾಸದ ಮೂಲಕ ಅಲ್ಲಾಹನು ಮಾಡಿದ ಮಹಾ ಅನುಗ್ರಹವೆಂದು ಕುರ್‌ಆನ್ ಹೇಳುತ್ತದೆ.

وَاذْكُرُوا نِعْمَتَ اللَّهِ عَلَيْكُمْ إِذْ كُنْتُمْ أَعْدَاءً فَأَلَّفَ بَيْنَ قُلُوبِكُمْ فَأَصْبَحْتُمْ بِنِعْمَتِهِ إِخْوَانًا

"ನಿಮ್ಮ ಮೇಲೆ ಅಲ್ಲಾಹನು ಮಾಡಿದ್ದ ಆ ಉಪಕಾರವನ್ನು ಸ್ಮರಿಸಿರಿ. ನೀವು ಪರಸ್ಪರ ಶತ್ರುಗಳಾಗಿದ್ದಿರಿ. ಅವನು ನಿಮ್ಮ ಹೃದಯಗಳನ್ನು ಜೋಡಿಸಿದನು ಮತ್ತು ಅವನ ಅನುಗ್ರಹದಿಂದ ನೀವು ಸಹೋದರರಾದಿರಿ."

(ಆಲಿ ಇಮ್ರಾನ್ : 103)

ಅಲ್ಲಾಹ್ ಮತ್ತು ಆತನ ಧರ್ಮದಲ್ಲಿ ವಿಶ್ವಾಸವಿರಿಸುವವರೆಲ್ಲರೂ ಒಂದೇ ಸಮುದಾಯವಾಗಿದ್ದಾರೆ. ಅವರು ಪರಸ್ಪರ ಪ್ರೀತಿ, ಕರುಣೆ, ಸಹಕಾರಗಳಿಂದ ವರ್ತಿಸಬೇಕು. ಒಂದೇ ದೇಹದಂತೆ. ಮಾತು ಅಥವಾ ವರ್ತನೆಯಿಂದ ಸಹೋದರನಿಗೆ ದ್ರೋಹ ಮಾಡಬಾರದು, ಅವನನ್ನು ಶೋಷಿಸಬಾರದು, ಮರ್ದಕರ ಕೈಗೆ ನೀಡಬಾರದು. ಸಹೋದರನನ್ನು ವಂಚಿಸುವುದು ಅಥವಾ ನಿಂದಿಸುವುದು ತಪ್ಪು. ತಾನು ಮೆಚ್ಚುವುದನ್ನು ಸಹೋದರನಿಗೂ ಮೆಚ್ಚಬೇಕು. ಹೀಗೆ ಪರಸ್ಪರ ಪ್ರೀತಿಸಿದರೆ ಇಹದಲ್ಲಿಯೂ ಪರದಲ್ಲಿಯೂ ಜಯ ಸಾಧಿಸಬಹುದು. ಈ ವಿಶ್ವಾಸದ ಪ್ರೀತಿ ಮತ್ತು ಸಹೋದರ ಭಾವವು ನಮ್ಮ ಪೂರ್ವಜರ ಜೀವನವನ್ನು ಬಹಳಷ್ಟು ಸುಧಾರಿಸಿತ್ತು. ಖಲೀಫಾ ಉಸ್ಮಾನ್‌ರ(ರ) ಬಗ್ಗೆ ಕೇಳಿರುವಿರಲ್ಲವೇ. ಅವರು ಮುಸ್ಲಿಮರನ್ನು ಅತ್ಯಧಿಕ ಪ್ರೀತಿಸಿದ ಮಹಾ ಪುರುಷರು. ಆರಂಭ ಕಾಲದಲ್ಲಿಯೇ ಪ್ರವಾದಿವರ್ಯರಲ್ಲಿ(ಸ) ವಿಶ್ವಾಸವಿರಿಸಿದ ಸಹಾಬಿ.

ಉಮರ್‌ರ(ರ) ಆಡಳಿತ ಕಾಲದಲ್ಲಿ ಮದೀನಾದಲ್ಲಿ ಒಮ್ಮೆ ಭೀಕರ ಬರಗಾಲ ಬಂತು. ಬೆಳೆ ಒಣಗಿ ಸಂಪೂರ್ಣ ನಾಶವಾಯಿತು. ಆಹಾರ ಸಾಮಗ್ರಿಗಳು ದೊರೆಯದೆ ಜನರು ಬಹಳ ಕಷ್ಟಪಟ್ಟರು. ಆ ವೇಳೆ ಉಸ್ಮಾನ್‌ರ(ರ) ವ್ಯಾಪಾರೀ ತಂಡ ಮದೀನಾಕ್ಕೆ ಬಂತು. ಸಾವಿರ ಒಂಟೆಗಳಿರುವ ಮಹಾ ವ್ಯಾಪಾರಿ ತಂಡ! ನಗರದ ವ್ಯಾಪಾರಿಗಳು ಅವರನ್ನು ಆವರಿಸಿದರು. 5ಶೇಕಡಾ ಲಾಭ ನೀಡುತ್ತೇವೆ, 10 ಶೇಕಡಾ

ನೀಡುತ್ತೇವೆ, 15ಶೇಕಡಾ ನೀಡುತ್ತೇವೆ. ಹೀಗೆ ಪ್ರತಿಯೊಬ್ಬರೂ ಲಾಭಾಂಶ ಏರಿಸಿ ಹೇಳಿದರು. ಗಿರಾಕಿಗಳು ಧಾರಾಳವಿದ್ದಾರೆ. ಸರಕು ಉಳಿಯುವ ಅವಕಾಶವೇ ಇಲ್ಲ. ಬೇಗ ಮಾರಾಟವಾಗಬಹುದು. ಆದರೆ ಉಸ್ಮಾನ್‌ರಿಂದ(ರ) ಎಲ್ಲರಿಗೂ ಒಂದೇ ಉತ್ತರ. "ಬೇರೊಬ್ಬರು ಹೆಚ್ಚು ಬೆಲೆ ಕೊಡುವೆನೆಂದು ಹೇಳಿದ್ದಾರೆ."

ವ್ಯಾಪಾರಿಗಳಿಗೆ ಆಶ್ಚರ್ಯ! ಮದೀನಾದ ಎಲ್ಲ ದೊಡ್ಡ ವ್ಯಾಪಾರಿಗಳೂ ಅಲ್ಲಿಗೆ ಬಂದಿದ್ದಾರೆ. ಎಲ್ಲರೂ ಗರಿಷ್ಠ ಲಾಭ ಕೊಡುವುದಾಗಿ ಹೇಳಿದ್ದಾರೆ. ಅದಕ್ಕಿಂತ ಹೆಚ್ಚು ಕೊಡುವವರು ಯಾರು?

ಆದರೆ, ಪುನಃ ಎಲ್ಲರನ್ನೂ ಅಚ್ಚರಿಪಡಿಸುತ್ತಾ ಉಸ್ಮಾನ್(ರ) ಹೇಳಿದರು: "ಸರಕುಗಳನ್ನು ಮದೀನಾದ ಜನರಿಗೆ ಸಂಪೂರ್ಣವಾಗಿ ದಾನ ಮಾಡಿದ್ದೇನೆ. ಅದಕ್ಕೆ 700ಪಟ್ಟು ಲಾಭ ನೀಡುವುದಾಗಿ ಅಲ್ಲಾಹನು ಹೇಳಿದ್ದಾನೆ."

ದಾನಧರ್ಮಗಳಿಗೆ 700ಪಟ್ಟು ಪ್ರತಿಫಲವಿದೆಯೆಂಬ ಕುರ್‌ಆನಿನ ವಾಕ್ಯವೇ ಅವರಿಗೆ ಪ್ರೇರಣೆಯಾಗಿತ್ತು. ನೋಡಿದಿರಾ! ವಿಶ್ವಾಸದ ಆಧಾರದಲ್ಲಿರುವ ಸಹೋದರ ಪ್ರೇಮದ ಮಾದರಿ.

ಆಯಿಶಾ(ರ) ಸತ್ಯವಿಶ್ವಾಸಿಗಳ ತಾಯಿಯಾಗಿದ್ದರು. ಅವರಿಗೆ ಸತ್ಯವಿಶ್ವಾಸಿಗಳೊಡನೆ ಹೆಚ್ಚಿನ ಪ್ರೀತಿಯಿತ್ತು. ಒಮ್ಮೆ ಮುಆವಿಯಾ(ರ) 7,000 ಬೆಳ್ಳಿ ನಾಣ್ಯಗಳನ್ನು ಅವರಿಗೆ ಕಳುಹಿಸಿದರು. ಆಯಿಶಾ(ರ) ಉಪವಾಸವಿದ್ದರು. ಅವರ ಬಟ್ಟೆ ಬರೆಗಳಲ್ಲಿ ತೇಪೆಗಳಿದ್ದುವು. ಆದರೂ ಅಷ್ಟೊಂದು ಹಣ ದೊರೆತಾಗ ಅವರು ಏನು ಮಾಡಿದರು? ಅದನ್ನು ಸಂಪೂರ್ಣವಾಗಿ ಬಡವರಿಗೆ ವಿತರಣೆ ಮಾಡಿದರು. ಒಂದು ನಾಣ್ಯವನ್ನಾದರೂ ಉಳಿಸಲಿಲ್ಲ. ಅದನ್ನು ನೋಡಿದ ಸೇವಕಿ ಹೇಳಿದಳು: "ಉಮ್ಮುಲ್ ಮೂಮಿನೀನ್, ಇಂದು ಉಪವಾಸ ಪಾರಣೆಗೆ ಇಲ್ಲಿ ಏನೂ ಇಲ್ಲ. ಒಂದು ನಾಣ್ಯ ಉಳಿಸಿದ್ದರೆ ನಮಗೆ ಉಪವಾಸ ತೊರೆಯಲು ಆಹಾರ ಖರೀದಿಸಬಹುದಾಗಿತ್ತು."

"ನಿಜ ಮಗಳೇ, ನೀನು ಇದನ್ನು ಮೊದಲೇ ಜ್ಞಾಪಿಸಿದ್ದರೆ ಹಾಗೆ ಮಾಡಬಹುದಾಗಿತ್ತು" ಎಂದು ಅವರು ಹೇಳಿದರು.

ನೋಡಿರಿ. ಸ್ವದೇಹ ಮತ್ತು ಕುಟುಂಬದ ಆವಶ್ಯಕತೆಗಳನ್ನು ಮರೆತು, ವಿಶ್ವಾಸಿಗಳಾದ ಸಹೋದರರನ್ನು ಪ್ರೀತಿಸುವುದು. ಎಂತಹ ಉನ್ನತ ಮಾದರಿ! ಆ ಮಾದರಿಯನ್ನು ನಾವು ಅನುಸರಿಸಬೇಕು.

ಸತ್ಯವಿಶ್ವಾಸಿಗಳು ಪರಸ್ಪರ ಸಹೋದರರೆಂದು ನೀವು ತಿಳಿದಿರಿ. ಹಾಗೆಯೇ ಎಲ್ಲ ಮಾನವರೂ ಜನ್ಮತಃ ಸಹೋದರರು. ಒಂದೇ ತಂದೆ ತಾಯಿಯ ಮಕ್ಕಳು. ಅವರು ಪರಸ್ಪರ ಸಹೋದರರಂತೆ ವರ್ತಿಸಬೇಕು.

ಪ್ರಶ್ನೆಗಳು:

1. ಇಸ್ಲಾಮ್ ಯಾವ ಪ್ರೀತಿಗೆ ಹೆಚ್ಚು ಪ್ರಾಮುಖ್ಯತೆ ನೀಡುತ್ತದೆ?

2. ಸತ್ಯವಿಶ್ವಾಸದಿಂದ ಅಲ್ಲಾಹನು ಮಾಡಿದ ಮಹಾ ಅನುಗ್ರಹ ಯಾವುದು?

3. ಉಸ್ಮಾನ್‌ರ(ರ) ಪ್ರೀತಿ ಮತ್ತು ಸಹೋದರತೆಯ ಒಂದು ಉದಾಹರಣೆ ನೀಡಿರಿ?

4. ಬಿಟ್ಟ ಪದಗಳನ್ನು ತುಂಬಿಸಿರಿ.

a) إِنَّ هَٰذِهِۦٓ أُمَّتُكُمْ .... فَاعْبُدُونِ ﴿٩٢﴾

b) ಆಯಿಶಾ(ರ).................... ತಾಯಿಯಾಗಿದ್ದರು.

③
ಸರಸ ಮತ್ತು ವಿರಸ

ಸತ್ಯವಿಶ್ವಾಸಿಗಳ ನಡುವೆ ಸಾಮರಸ್ಯ ಮತ್ತು ಪ್ರೀತಿಯಿರಬೇಕು. ಪರಸ್ಪರರನ್ನು ಕಂಡಾಗ ಸಲಾಮ್ ಹೇಳಬೇಕು. ಹಸ್ತಲಾಘವ ಮಾಡಿ ಪರಿಚಯಿಸಬೇಕು. ಏಕೆಂದರೆ, ಮುಸ್ಲಿಮರು ಪರಸ್ಪರ ಸಹೋದರರು. ಇದನ್ನು ನಾವು ಹಿಂದಿನ ಪಾಠದಲ್ಲಿ ಕಲಿತಿದ್ದೇವೆ.

ಆದರೆ, ಸಹೋದರರ ಮಧ್ಯೆ ಕೆಲವೊಮ್ಮೆ ವಿರಸವುಂಟಾಗಬಹುದು. ಮಾನವರಲ್ಲಿ ವಿವಿಧ ಸ್ವಭಾವದವರಿರುತ್ತಾರೆ. ಒಬ್ಬರ ವರ್ತನೆಯು ಇನ್ನೊಬ್ಬರಿಗೆ ಸರಿಗಾಣದಿರಬಹುದು. ಒಬ್ಬರ ಮಾತು ಇನ್ನೊಬ್ಬರಿಗೆ ರುಚಿಸದಿರಬಹುದು. ಹೀಗೆ ಹಲವು ಕಾರಣಗಳಿಂದ ವಿರಸವುಂಟಾಗುತ್ತದೆ.

ಆದರೆ, ಒಮ್ಮೆ ವಿರಸವಾದರೆ ಯಾವಾಗಲೂ ಹಾಗೆಯೇ ಇರಬಹುದೇ? ಇರಬಾರದು. ಕೂಡಲೇ ವೈಮನಸ್ಸಿನ ವಿಷಯವನ್ನು ಮರೆತು ಬಿಡಬೇಕು. ಆ ಬಳಿಕ ಸಲಾಮ್ ಹೇಳಿ ಪುನಃ ಪ್ರೀತಿ ತೋರಿಸಬೇಕು. ಮೊದಲು ಸಲಾಮ್ ಹೇಳುವಾತ ಅತ್ಯುತ್ತಮನು. ಪ್ರವಾದಿ(ಸ) ಹೀಗೆ ಹೇಳಿದ್ದಾರೆ:

"ಒಬ್ಬ ಮುಸ್ಲಿಮನು ತನ್ನ ಸಹೋದರನೊಡನೆ ಮೂರು ದಿನಗಳಿಗಿಂತ ಹೆಚ್ಚು ದಿನ ಕೋಪಿಸಿಕೊಳ್ಳಬಾರದು. ಮೂರು ದಿನಗಳಾದರೆ ಆತನನ್ನು ಭೇಟಿಯಾಗಿ ಸಲಾಮ್ ಹೇಳಬೇಕು. ಆತ ಪ್ರತಿ ಸಲಾಮ್ ಹೇಳಿದರೆ ಇಬ್ಬರಿಗೂ ಪ್ರತಿಫಲವಿದೆ. ಪ್ರತಿ ಸಲಾಮ್ ಹೇಳದಿದ್ದರೆ? ಹೇಳದವನು ಅಪರಾಧಿಯಾಗುತ್ತಾನೆ! ಸಲಾಮ್ ಹೇಳಿದಾತನು ವಿರಸದ ತಪ್ಪಿನಿಂದ ಮುಕ್ತನಾಗುತ್ತಾನೆ." (ಅಬೂದಾವೂದ್)

ಕೆಲವರು ವಿರಸವುಂಟಾದರೆ ಕಡು ವೈರಿಗಳಾಗುತ್ತಾರೆ. ನಾವು ಹಿಂದೆ ಸ್ನೇಹಿತರಾಗಿದ್ದೆವೆಂಬ ವಿಷಯವೂ ಅವರಿಗೆ ನೆನಪಿರುವುದಿಲ್ಲ. ಪರಸ್ಪರ ದೂಷಿಸುತ್ತಾರೆ. ಕೆಟ್ಟ ಮಾತುಗಳನ್ನು ಹೇಳುತ್ತಾರೆ. ಇದು ಮುಸ್ಲಿಮನ ಸ್ವಭಾವವಲ್ಲ. ವಿರಸವುಂಟಾದರೆ ಕೆಟ್ಟ ಮಾತು ಹೇಳುವುದು ಕಪಟವಿಶ್ವಾಸಿಗಳ ಲಕ್ಷಣವೆಂದು ಪ್ರವಾದಿ(ಸ) ಕಲಿಸಿದ್ದಾರೆ.

ಹುಸೈನ್‌ರ(ರ) ಬಗ್ಗೆ ಕೇಳಿದ್ದೀರಾ? ಪ್ರವಾದಿವರ್ಯರ(ಸ) ಮೊಮ್ಮಗ. ಅಲೀ(ರ) ಮತ್ತು ಫಾತಿಮಾರ ಪುತ್ರ. ಅವರಿಗೆ ಮುಹಮ್ಮದ್ ಎಂಬ ಸಹೋದರನಿದ್ದ. ಅದು ಫಾತಿಮಾರ ಪುತ್ರನಲ್ಲ. ಅಲೀಯವರ(ರ) ಇನ್ನೋರ್ವ ಪತ್ನಿಯ ಪುತ್ರ.

ಒಮ್ಮೆ ಹುಸೈನ್(ರ) ಮತ್ತು ಮುಹಮ್ಮದ್‌ರಿಗೆ ಜಗಳವಾಯಿತು. ಇಬ್ಬರೂ ಬೇರೆ ಬೇರೆ ವಾಸವಾಗಿದ್ದರು. ಹಾಗೆಯೇ ಕೆಲವು ದಿನಗಳು ಕಳೆದುವು. ಅನಂತರ ಮುಹಮ್ಮದ್ ಸಹೋದರನಿಗೆ ಪತ್ರ ಬರೆದರು: "ಈ ಪತ್ರ ತಲಪಿದ ಕೂಡಲೇ ನೀವು ನನಗೆ ಸಲಾಮ್ ಹೇಳಬೇಕು. ನಾನು ಅಲ್ಲಿಗೆ ಬಂದು ಸಲಾಮ್ ಹೇಳಬೇಕಾಗಿತ್ತು. ಆದರೆ, ನೀವು ನನಗಿಂತ ಶ್ರೇಷ್ಠರಾಗಿದ್ದೀರಿ. ನಿಮ್ಮ ತಾಯಿಯು ಪ್ರವಾದಿವರ್ಯರ(ಸ) ಪುತ್ರಿಯಾಗಿದ್ದಾರೆ. ನನ್ನ ತಾಯಿಯಾದರೋ ಗುಲಾಮ ಮಹಿಳೆ. ಆದ್ದರಿಂದ ಇಲ್ಲಿಗೆ ಬಂದು ಮೊದಲು ಸಲಾಮ್ ಹೇಳಿದ ಪುಣ್ಯ ನಿಮಗೆ ದೊರೆಯಲೆಂದು ಹಾರೈಸುತ್ತೇನೆ." ಪತ್ರ ದೊರೆತ ಕೂಡಲೇ ಹುಸೈನ್(ರ) ಮುಹಮ್ಮದ್‌ರ ಬಳಿಗೆ ಹೊರಟರು. ಇಬ್ಬರೂ ದಾರಿಯಲ್ಲಿ ಭೇಟಿಯಾದರು. ತಕ್ಷಣ ಅಪ್ಪಿಕೊಂಡು ಅತ್ತು ಬಿಟ್ಟರು. ಎಲ್ಲ ವಿರಸವೂ ಮಾಯವಾಯಿತು.

ನೋಡಿದಿರಾ! ನಮ್ಮ ಪೂರ್ವಜರ ಗುಣ! ಪರಸ್ಪರ ಕೋಪಿಸಿದರೂ ಇನ್ನೊಬ್ಬನಿಗೆ ಹಿತವಾಗಬೇಕೆಂದು ಬಯಸುತ್ತಾರೆ. ಕೆಟ್ಟ ಮಾತುಗಳಿಂದ ದೂಷಿಸಿ ಸಹೋದರನನ್ನು ಜನರ ಮುಂದೆ ಅಪಮಾನಿಸುವುದಿಲ್ಲ.

ಇನ್ನು, ಜಗಳಾಡಿದವರು ಸ್ವಯಂ ರಾಜಿಯಾಗದಿದ್ದರೆ? ಇತರರು ರಾಜಿ ಮಾಡಿಸಬೇಕು. ವಿವಾದಗಳನ್ನು ಬಗೆಹರಿಸಬೇಕು. ಕುರ್‌ಆನ್ ಹೇಳುತ್ತದೆ:

إِنَّمَا الْمُؤْمِنُونَ إِخْوَةٌ فَأَصْلِحُوا بَيْنَ أَخَوَيْكُمْ

"ಸತ್ಯವಿಶ್ವಾಸಿಗಳಂತು ಪರಸ್ಪರ ಸಹೋದರರು. ಆದುದರಿಂದ ನಿಮ್ಮ ಸಹೋದರರ ನಡುವೆ ಸಂಬಂಧಗಳನ್ನು ಸರಿಪಡಿಸಿರಿ." (ಅಲ್ ಹುಜುರಾತ್ : 10)

ಹೀಗೆ, ಕೋಪದಲ್ಲಿರುವವರನ್ನು ಒಂದುಗೂಡಿಸುವುದು ದೊಡ್ಡ ಸತ್ಕರ್ಮವಾಗಿದೆ. ನಮಾಝ್, ಉಪವಾಸ, ದಾನಧರ್ಮಗಳಂತಹ ಪುಣ್ಯ ಕರ್ಮ! ಅದಕ್ಕಾಗಿ ಹಾನಿಕರವಲ್ಲದ ಸುಳ್ಳು ಹೇಳಬಹುದೆಂದೂ ಪ್ರವಾದಿ(ಸ) ಕಲಿಸಿದ್ದಾರೆ.

ವಿರಸದ ವಿಷಯದಲ್ಲಿ ಸಮುದಾಯಗಳ ಸ್ಥಿತಿಯೂ ವ್ಯಕ್ತಿಗಳಿಗಿಂತ ಭಿನ್ನವಲ್ಲ. ಸತ್ಯವಿಶ್ವಾಸಿಗಳ ಎರಡು ವಿಭಾಗಗಳು ಪರಸ್ಪರ ಜಗಳಾಡಿ ದ್ವೇಷ ಮತ್ಸರ ಬೆಳೆಸಬಾರದು. ಕಾರಣಾಂತರದಿಂದ ವಿರಸವುಂಟಾದರೆ ಇತರರು ನ್ಯಾಯೋಚಿತ ಸಂಧಾನ ಮಾಡಿಸಬೇಕು. ಕುರ್‌ಆನ್ ಹೀಗೆ ಹೇಳುತ್ತದೆ:

وَإِنْ طَائِفَتَانِ مِنَ الْمُؤْمِنِينَ اقْتَتَلُوا فَأَصْلِحُوا بَيْنَهُمَا ۖ فَإِنْ بَغَتْ إِحْدَاهُمَا
عَلَى الْأُخْرَىٰ فَقَاتِلُوا الَّتِي تَبْغِي حَتَّىٰ تَفِيءَ إِلَىٰ أَمْرِ اللَّهِ ۚ فَإِنْ فَاءَتْ

فَأَصْلِحُوا بَيْنَهُمَا بِالْعَدْلِ وَأَقْسِطُوا إِنَّ اللَّهَ يُحِبُّ الْمُقْسِطِينَ ⑨

"ಸತ್ಯವಿಶ್ವಾಸಿಗಳಲ್ಲಿ ಎರಡು ಗುಂಪುಗಳು ಪರಸ್ಪರ ಜಗಳಾಡಿದರೆ ಅವರ ನಡುವೆ ಸಂಧಾನ ಮಾಡಿಸಿರಿ. ಅವರಲ್ಲಿ ಒಂದು ಗುಂಪು ಇನ್ನೊಂದು ಗುಂಪಿನ ಮೇಲೆ ಅತಿರೇಕವೆಸಗಿದರೆ ಅತಿರೇಕವೆಸಗಿದವರು ಅಲ್ಲಾಹನ ಆದೇಶದೆಡೆಗೆ ಮರಳಿ ಬರುವವರೆಗೂ ಅವರ ವಿರುದ್ಧ ಹೋರಾಡಿರಿ. ತರುವಾಯ ಅವರು ಮರಳಿ ಬಂದರೆ ಅವರ ಮಧ್ಯೆ ನ್ಯಾಯಪೂರ್ಣ ಸಂಧಾನ ಮಾಡಿಸಿಬಿಡಿರಿ ಮತ್ತು ನ್ಯಾಯವನ್ನು ಪಾಲಿಸಿರಿ. ಅಲ್ಲಾಹನು ನ್ಯಾಯ ಪಾಲಿಸುವವರನ್ನು ಪ್ರೀತಿಸುತ್ತಾನೆ."

(ಅಲ್ ಹುಜರಾತ್ : 9)

ಹೀಗೆಯೇ ಸಂಬಂಧಿಕರ ಮಧ್ಯೆ ಜಗಳವಾಗಬಹುದು. ಜಗಳದಿಂದ ಪರಸ್ಪರ ಸಂಬಂಧ ಕಡಿಯಬಹುದು. ಆದರೆ, ಸತ್ಯವಿಶ್ವಾಸಿಗಳ ನಡುವಣ ಕುಟುಂಬ ಸಂಬಂಧಗಳು ಎಂದೆಂದಿಗೂ ಕಡಿದು ಹೋಗಬಾರದು. ಅದು ಪರಲೋಕದಲ್ಲಿ ಸ್ವರ್ಗವನ್ನೇ ನಷ್ಟಗೊಳಿಸುವ ಅಪರಾಧವಾಗಿದೆ.

لَا يَدْخُلُ الْجَنَّةَ قَاطِعُ رَحِمٍ (متفق عليه)

"ಕುಟುಂಬ ಸಂಬಂಧ ಕಡಿದುಕೊಂಡಾತನು ಸ್ವರ್ಗದಲ್ಲಿ ಪ್ರವೇಶಿಸುವುದಿಲ್ಲ."

(ಬುಖಾರಿ, ಮುಸ್ಲಿಮ್)

ಹೀಗೆ ಸಂಬಂಧ ಕಡಿದವರೊಡನೆ ಮರುಸಂಬಂಧ ಸ್ಥಾಪಿಸಬೇಕು. ಇದು ಸತ್ಯವಿಶ್ವಾಸಿಯ ಗುಣ. ಪ್ರವಾದಿವರ್ಯರು(ಸ) ಹೀಗೆ ಹೇಳಿದ್ದಾರೆ:

مَنْ كَانَ يُؤْمِنُ بِاللَّهِ وَالْيَوْمِ الْآخِرِ فَلْيَصِلْ رَحِمَهُ (متفق عليه)

"ಅಲ್ಲಾಹ್ ಮತ್ತು ಅಂತ್ಯ ದಿನದಲ್ಲಿ ವಿಶ್ವಾಸವಿರಿಸುವವರು ಕುಟುಂಬ ಸಂಬಂಧವನ್ನು ಬೆಸೆಯಲಿ."

(ಬುಖಾರಿ, ಮುಸ್ಲಿಮ್)

ಹೌದು, ವಿರಸ, ಶತ್ರುತ್ವ, ದ್ವೇಷದ ಬದಲಾಗಿ ಸರಸ, ಪ್ರೀತಿ ಮತ್ತು ಸಹೋದರತೆಯು ಮುಸ್ಲಿಮನ ಸ್ವಭಾವವಾಗಿದೆ.

ಪ್ರಶ್ನೆಗಳು:

1. ಜಗಳವಾದರೆ ಕೆಟ್ಟದ್ದನ್ನು ಮಾತಾಡುವುದು ಯಾರ ಸ್ವಭಾವ?
2. ಕೋಪವಿದ್ದರೂ ನಮ್ಮ ಪೂರ್ವಜರು ಪರಸ್ಪರ ಹಿತಾಕಾಂಕ್ಷಿಗಳಾಗಿದ್ದರು. ಒಂದು ಉದಾಹರಣೆ ಕೊಡಿ.
3. ಸತ್ಯವಿಶ್ವಾಸಿಗಳಲ್ಲಿ ವಿರಸವುಂಟಾದರೆ ರಾಜಿಮಾಡಿಸಲು ಏನು ಮಾಡಬೇಕು?
4. ಸತ್ಯವಿಶ್ವಾಸಿಗಳು ಪರಸ್ಪರ...........
5. ಎರಡು ಗುಂಪುಗಳು ಪರಸ್ಪರ ಜಗಳಾಡಿದರೆ ಏನು ಮಾಡಬೇಕು?
6. ಹಾನಿಕರವಲ್ಲದ ಸುಳ್ಳಿಗೆ ಅನುಮತಿ ನೀಡಿದ್ದೇಕೆ?

4

ಸ್ವಾರ್ಥ ಮತ್ತು ತ್ಯಾಗ

ಮಾನವನು ಸಂಘ ಜೀವಿ. ಅರ್ಥಾತ್, ಯಾರಿಗೂ ಇಲ್ಲಿ ಒಂಟಿಯಾಗಿ ಜೀವಿಸಲು ಸಾಧ್ಯವಿಲ್ಲ. ಇತರರ ಸಹಾಯ ಸಹಕಾರಗಳ ಅಗತ್ಯವಿದೆ. ಜನನದಿಂದ ಮರಣದ ತನಕ. ಇದು ಮಾನವನ ಸ್ಥಿತಿ.

ನಾವು ಸೇವಿಸುವ ಆಹಾರ, ಧರಿಸುವ ಬಟ್ಟೆಬರೆ, ವಾಸಿಸುವ ಮನೆ ಇತ್ಯಾದಿಗಳ ಬಗ್ಗೆ ನೀವು ಯೋಚಿಸಿ ನೋಡಿರಿ. ಅನೇಕ ಜನರ ಸಹಾಯ ಸಹಕಾರಗಳಿಂದ ಅವು ನಮಗೆ ದೊರೆಯುತ್ತವೆ. ಕಾರಣವೇನು? ಅಲ್ಲಾಹನು ಎಲ್ಲ ಸಾಮರ್ಥ್ಯಗಳನ್ನೂ ಒಬ್ಬರಿಗೆ ನೀಡಿಲ್ಲ. ಹಲವರಲ್ಲಿ ಹಲವು ಸಾಮರ್ಥ್ಯಗಳಿವೆ. ಈ ಸಾಮರ್ಥ್ಯಗಳನ್ನು ಪರಸ್ಪರ ವಿನಿಮಯ ಮಾಡಬೇಕು. ಹಾಗಾದರೆ ಮಾತ್ರ ಮಾನವರು ಇಲ್ಲಿ ಸುಖವಾಗಿ ಬಾಳಬಹುದು.

ಈ ವಿಷಯವನ್ನು ಕೆಲವರು ಗ್ರಹಿಸುವುದಿಲ್ಲ. ನಮಗೆ ಅಲ್ಲಾಹನು ನೀಡಿದ ಸಾಮರ್ಥ್ಯಗಳು ಕೇವಲ ತಮ್ಮ ಉಪಯೋಗಕ್ಕಾಗಿ ಎಂದು ಭಾವಿಸುತ್ತಾರೆ. ಇತರರಿಗೆ ಯಾವ ರೀತಿಯ ಸಹಾಯವನ್ನೂ ಮಾಡುವುದಿಲ್ಲ. ಒಂದು ಮುಗುಳ್ನಗೆಯನ್ನೂ ಇತರರಿಗೆ ನೀಡುವುದಿಲ್ಲ. ಆದರೆ ಇತರರ ಸಹಕಾರ ನಮಗೂ ಬೇಡವೆಂದು ಹೇಳುತ್ತಾರೆಯೇ? ಇಲ್ಲ, ಆ ಸಾಮರ್ಥ್ಯ ಅವರಿಗಿಲ್ಲ. ಆದರೂ ಅವರ ಭಾವನೆ ಹಾಗಿದೆ. ಇಂತಹ ಮಂದಿಯನ್ನು ಜಿಪುಣರೆನ್ನುತ್ತಾರೆ. ಜಿಪುಣತೆಯು ಸಾಮಾಜಿಕ ಜೀವನಕ್ಕೆ ಸಲ್ಲದ ಮಹಾ ದುರ್ಗುಣ. ಆದ್ದರಿಂದ ಸತ್ಯವಿಶ್ವಾಸಿಗಳು ಜಿಪುಣತೆ ತೋರಬಾರದೆಂದು ಅಲ್ಲಾಹನು ಆಜ್ಞಾಪಿಸಿದ್ದಾನೆ. ಕುರ್‌ಆನ್ ಹೇಳುತ್ತದೆ:

وَمَن يُوقَ شُحَّ نَفْسِهِۦ فَأُو۟لَٰٓئِكَ هُمُ ٱلْمُفْلِحُونَ ⑨

"ಯಾರು ತಮ್ಮ ಮನಸ್ಸಿನ ಸಂಕುಚಿತತೆಯಿಂದ ರಕ್ಷಿಸಲ್ಪಟ್ಟರೋ ಅವರೇ ವಿಜಯಿಗಳು." (ಅಲ್ ಹಶ್ರ್ :9)

ಇನ್ನು ಕೆಲವರಿದ್ದಾರೆ. ಅವರು ವೆಚ್ಚ ಮಾಡುವುದಕ್ಕೆ ಲೆಕ್ಕ ಮಿತಿಯಿಲ್ಲ. ಜಿಪುಣತೆಯಂತೆಯೇ ದುಂದುವೆಚ್ಚವೂ ಒಂದು ದುರ್ಗುಣವಾಗಿದೆ. ಅವರು ಹೀಗೆ

ದುಂದುವೆಚ್ಚ ಮಾಡುವುದು ಇತರರ ಉಪಕಾರಕ್ಕಾಗಿಯಲ್ಲ. ಬದಲಾಗಿ ತಮ್ಮ ಹಿರಿಮೆ, ಹೆಗ್ಗಳಿಕೆ ಮತ್ತು ಆಡಂಬರದ ಜೀವನಕ್ಕಾಗಿ ಅವರು ದುಂದುವೆಚ್ಚ ಮಾಡುತ್ತಾರೆ. ಇಂತಹ ಅನಾವಶ್ಯಕತೆಗಳಿಗಾಗಿ ಹಣವೆಚ್ಚಮಾಡುವುದೇ ತಪ್ಪು. ಅದು ಆದಾಯವನ್ನು ಮೀರಿದರೆ ಮತ್ತಷ್ಟು ಅಪಾಯಕಾರಿಯಾಗುತ್ತದೆ. ಅಲ್ಲಾಹನು ಹೇಳಿದ್ದಾನೆ:

وَلَا تُبَذِّرْ تَبْذِيرًا ۝ إِنَّ الْمُبَذِّرِينَ كَانُوا إِخْوَانَ الشَّيَاطِينِ

"ದುಂದುವೆಚ್ಚ ಮಾಡಬೇಡಿರಿ. ದುಂದುಗಾರರು ಶೈತಾನನ ಸಹೋದರರಾಗಿರುತ್ತಾರೆ."

(ಬನೀ ಇಸ್ರಾಈಲ್ : 26, 27)

ಮೇಲೆ ಹೇಳಿದ ಎರಡು ಗುಣಗಳಿಗೂ ಸ್ವಾರ್ಥವೇ ಕಾರಣವಾಗಿದೆ. ಕೇವಲ ನಾನು, ನನ್ನದು ಎಂಬ ಚಿಂತೆ. ಇದು ಮಾನವರ ಸಾಮಾಜಿಕ ಜೀವನವನ್ನು ಹಾಳು ಮಾಡುತ್ತದೆ. ಪರಸ್ಪರ ಶತ್ರುತ್ವ ಮತ್ತು ದ್ವೇಷವನ್ನು ಬೆಳೆಸುತ್ತದೆ.

ಆದರೆ ಇನ್ನೊಂದು ಸ್ವಭಾವದವರಿದ್ದಾರೆ. ತಮ್ಮ ಆವಶ್ಯಕತೆಗಳನ್ನು ಮರೆತು ಇತರರಿಗೆ ಸಹಾಯ ಮಾಡುವವರು. ಇತರರ ಸುಖ ಸಂತೋಷಕ್ಕಾಗಿ ತಮ್ಮ ಸುಖ ಸಂತೋಷಗಳನ್ನು ತೊರೆಯುವವರು. ಇದು ಅತ್ಯುನ್ನತ ತ್ಯಾಗ-ಮನೋಭಾವವಾಗಿದೆ. ಇಂತಹ ತ್ಯಾಗ ಮನೋಭಾವವಿಲ್ಲದಿದ್ದರೆ ಮಾನವರ ಪ್ರಗತಿ, ನಾಗರಿಕತೆಗಳೆಲ್ಲ ನಿಂತು ಬಿಡುತ್ತದೆ.

ನಿಮಗೆ ತಿಳಿದಿದೆಯಲ್ಲವೇ? ಮನೆಮಾರುಗಳನ್ನು ತೊರೆದು ಮುಹಾಜಿರರು ಮಕ್ಕಾದಿಂದ ಮದೀನಾಕ್ಕೆ ವಲಸೆ ಹೋದಾಗ ಅನ್ಸಾರರು ಏನು ಮಾಡಿದರು? ಪ್ರತಿಯೊಬ್ಬ ಅನ್ಸಾರಿಯೂ ಓರ್ವ ಮುಹಾಜಿರ್‌ನನ್ನು ಸಹೋದರನಾಗಿ ಸ್ವೀಕರಿಸಿ ಮನೆಗೆ ಕರೆದೊಯ್ದರು. ಸಂಪತ್ತನ್ನು ಎರಡು ಪಾಲು ಮಾಡಿದರು. ಆಹಾರ ಸಾಮಗ್ರಿ, ಬಟ್ಟೆಬರೆ, ವಾಹನಗಳನ್ನು ಸಮಪಾಲು ಮಾಡಿದರು. ಒಂದು ಪಾಲು ಮುಹಾಜಿರ್ ಸಹೋದರನಿಗೆ. ಮನೆಯವರು ಮತ್ತು ಅನ್ಯರ ಮಧ್ಯೆ ಯಾವುದೇ ವ್ಯತ್ಯಾಸವಿಲ್ಲ. ಅದೆಂತಹ ತ್ಯಾಗ!

ಖಲೀಫಾ ಉಮರ್ ಫಾರೂಕ್‌ರ(ರ) ಆಡಳಿತ ಕಾಲ. ಅನಾವೃಷ್ಟಿಯಿಂದ ಮದೀನಾದಲ್ಲಿ ತೀವ್ರ ಬರಗಾಲ ಬಂದಿದೆ. ಖಲೀಫರು ಜನರ ಸಂಕಷ್ಟ ಪರಿಹಾರದ ಬಗ್ಗೆ ಮಾತ್ರ ಚಿಂತಿಸುತ್ತಿದ್ದಾರೆ. ಸರಿಯಾಗಿ ಆಹಾರವಿಲ್ಲ. ಹಲವೊಮ್ಮೆ ರಾತ್ರಿಯಲ್ಲಿ ನಿದ್ದೆ ಬರುವುದಿಲ್ಲ. ಹೀಗೆ ಚಿಂತಿಸುತ್ತಾ ಹಸಿವೆಯಿಂದ ಬಹಳವಾಗಿ ಬಳಲಿದ್ದರು. ಅವರ ಸ್ಥಿತಿ ಹೇಗಿತ್ತು? "ಒಂದು ವೇಳೆ ಬರಗಾಲವು ಇನ್ನೂ ಕೆಲವು ತಿಂಗಳು

ಮುಂದುವರಿದಿದ್ದರೆ ಜನರ ಬಗೆಗಿನ ದುಃಖದಿಂದ ಅವರ ಪ್ರಾಣ ಹೋಗಿ ಬಿಡುತ್ತಿತ್ತು" ಎಂಬುದಾಗಿ ಉಮರ್ ಫಾರೂಕ್‌ರ(ರ) ಅಂದಿನ ಸ್ಥಿತಿಯನ್ನು ಓರ್ವ ಸಹಾಬಿ ವಿವರಿಸಿದ್ದಾರೆ.

ಹೀಗಿರಲು ಈಜಿಪ್ಟ್‌ನ ರಾಜ್ಯಪಾಲರು ಮದೀನಾಕ್ಕೆ ಸಾಕಷ್ಟು ಆಹಾರ ಸಾಮಗ್ರಿಗಳನ್ನು ಕಳುಹಿಸಿದ್ದರು. ಖಲೀಫರಿಗೆ ಸ್ವಲ್ಪ ಸಮಾಧಾನವಾಯಿತು. ಅವರು ತಮ್ಮ ಸ್ವಂತ ಕೈಯಿಂದಲೇ ಅದೆಲ್ಲವನ್ನೂ ಜನರಿಗೆ ವಿತರಣೆ ಮಾಡಿದರು. ಆಹಾರ ಸಾಮಗ್ರಿಗಳನ್ನು ತಂದ ಯಾತ್ರಾ ತಂಡದ ಮುಖಂಡನನ್ನು ಕರೆದು, "ಇಂದು ನಿಮ್ಮ ಊಟ ನನ್ನ ಜತೆಯಲ್ಲಿ" ಎಂದು ಹೇಳಿದರು.

ಮುಖಂಡನಿಗೆ ಸಂತೋಷವಾಯಿತು. ಖಲೀಫಾರ ಜತೆಗಲ್ಲವೇ, ಭಕ್ಷ್ಯ ಪದಾರ್ಥ ಭರ್ಜರಿಯಾಗಿರಬಹುದು! ಅಲ್ಲಿಗೆ ಹೋದಾಗ ಅವರಿಗೆ ಅಚ್ಚರಿಯಾಯಿತು. ಕೆಲವು ಒಣ ರೊಟ್ಟಿ ತುಂಡುಗಳು! ಸ್ವಲ್ಪ ಖಾದ್ಯ ತೈಲ! ತುಪ್ಪ, ಮಾಂಸ ಏನೂ ಇಲ್ಲ. ಅವರು ಕೇಳಿದರು: "ಅಮೀರುಲ್ ಮೂಮಿನೀನ್, ನೀವು ನನ್ನನ್ನು ಜನರ ಜತೆಗೂಡಿ ತುಪ್ಪ ಮತ್ತು ಮಾಂಸವಿರುವ ಆಹಾರ ಸೇವಿಸದಂತೆ ಮಾಡಿದ್ದೇಕೆ?"

"ನಾನು ತಿನ್ನುವುದನ್ನೇ ನಿಮಗೂ ನೀಡಿದ್ದೇನೆ" ಉಮರ್(ರ) ಹೇಳಿದರು.

"ಜನರಿಗೆ ಮಾಂಸ ಮತ್ತು ತುಪ್ಪವನ್ನು ನೀವೇ ವಿತರಣೆ ಮಾಡಿದ್ದಲ್ಲವೇ! ಅವರು ತಿನ್ನುವುದನ್ನು ನೀವೂ ತಿನ್ನಬಾರದೇ?" ಅವರು ಪುನಃ ಕೇಳಿದರು.

"ತುಪ್ಪ ಮಾಂಸ ತಿಂದು ಜನರ ಹೊಟ್ಟೆ ತುಂಬುವ ತನಕ ನಾನು ಅವೆರಡನ್ನೂ ತಿನ್ನುವುದಿಲ್ಲವೆಂದು ಶಪಥ ಹಾಕಿದ್ದೇನೆ" ಉಮರ್(ರ) ಹೇಳಿದರು.

ನೋಡಿದಿರಾ, ತ್ಯಾಗದ ಮಾದರಿ! ಸಹೋದರರ ಅಗತ್ಯಗಳಿಗಾಗಿ ತನ್ನ ಅತಿ ಸಣ್ಣ ಅಗತ್ಯವನ್ನೂ ತೊರೆದಿದ್ದಾರೆ. ಇಂತಹ ಅನೇಕ ಘಟನೆಗಳು ಚರಿತ್ರೆಯಲ್ಲಿವೆ. ಮರಣ ಸಮೀಪಿಸಿದ ವೇಳೆಯಲ್ಲಿಯೂ ಅವರ ಈ ತ್ಯಾಗ ಮನೋಭಾವ ಪ್ರಕಟವಾಗಿತ್ತು. ಇದೋ ಒಂದು ಘಟನೆ:

ಯರ್ಮೂಕ್‌ನ ಯುದ್ಧರಂಗ. ಹಲವರು ಸಾವಿಗೀಡಾಗಿದ್ದಾರೆ. ಕೆಲವರು ಗಂಭೀರವಾಗಿ ಗಾಯಗೊಂಡಿದ್ದಾರೆ. ಓರ್ವ ಸಹಾಬಿಯು ನೀರಿನ ಪಾತ್ರೆ ಹಿಡಿದು ತನ್ನ ಚಿಕ್ಕಪ್ಪನ ಮಗನನ್ನು ಹುಡುಕುತ್ತಿದ್ದಾರೆ. ಬದುಕಿದ್ದರೆ ಸ್ವಲ್ಪ ನೀರು ಕೊಡೋಣವೆಂದು ಅವರು ಅಲ್ಲಿಗೆ ಬಂದಿದ್ದರು. ಅದೋ ಅಲ್ಲಿ ಬಿದ್ದಿದ್ದಾರೆ. ಉಸಿರಾಡುತ್ತಿದ್ದಾರೆ. ಸಹಾಬಿ ಅವರೊಡನೆ, "ನೀರು ಬೇಕೇ?" ಎಂದು ಕೇಳುತ್ತಾರೆ. ಅವರು ಬೇಕೆಂದು ಸನ್ನೆ ಮಾಡುತ್ತಾರೆ. ಆಗ ಹತ್ತಿರದಿಂದ ಒಂದು ಶಬ್ದ ಕೇಳಿಸುತ್ತದೆ. 'ಆಹ್! ಆಹ್!' ಕೂಡಲೇ ಅಲ್ಲಿಗೆ ಹೋಗುವಂತೆ ಅವರು ಸೂಚಿಸುತ್ತಾರೆ. ಅಲ್ಲಿ ಹೋಗಿ ನೋಡಿದಾಗ ಮಿತ್ರ ಹಿಶಾಮ್ ಮಲಗಿದ್ದರು. ಸಹಾಬಿ ಹೇಳುತ್ತಾರೆ: ನಾನು

ಅವರೊಡನೆ "ನೀರು ಬೇಕೇ?" ಎಂದು ಕೇಳಿದೆ. ಹೌದೆಂದು ಅವರು ಸನ್ನೆ ಮಾಡಿದರು. ಅಷ್ಟರಲ್ಲಿ ಸ್ವಲ್ಪ ದೂರದಿಂದ ಇನ್ನೊಂದು ಶಬ್ದ 'ಆಹ್! ಆಹ್!' ಕೂಡಲೇ ಅಲ್ಲಿಗೆ ಹೋಗುವಂತೆ ಹಿಶಾಮ್ ಸೂಚಿಸಿದರು. ಹೋಗಿ ನೋಡಿದಾಗ ಅವರು ಮರಣ ಹೊಂದಿದ್ದರು. ನಾನು ಹಿಶಾಮ್‌ರಿಗೆ ನೀರು ನೀಡಲಿಕ್ಕಾಗಿ ವೇಗವಾಗಿ ಅಲ್ಲಿಂದ ಮರಳಿದೆ. ಅವರೂ ಮರಣ ಹೊಂದಿದ್ದರು. ಅಲ್ಲಿಂದ ಕೂಡಲೇ ಚಿಕ್ಕಪ್ಪನ ಮಗನ ಬಳಿಗೆ ಹೋದೆ. ಆದರೆ, ನೀರು ದೊರೆಯದೆ ಅವರೂ ಪ್ರಾಣ ಬಿಟ್ಟಿದ್ದರು.

ನೋಡಿದಿರಾ, ಮರಣ ವೇಳೆಯಲ್ಲಿಯೂ ನೀರನ್ನು ಇತರರಿಗೆ ದಾನ ಮಾಡುವ ಮನಸ್ಸು. ಇದಕ್ಕಿಂತ ದೊಡ್ಡ ತ್ಯಾಗ ಬೇರೆ ಇದೆಯೇ? ಆ ತ್ಯಾಗ ಮನೋಭಾವವನ್ನು ನಾವು ಬೆಳೆಸಬೇಕು.

ಪ್ರಶ್ನೆಗಳು:

1. ಸಾಮಾಜಿಕ ಜೀವನಕ್ಕೆ ಸೂಕ್ತವಲ್ಲದ ದುರ್ಗುಣ ಯಾವುದು?
2. ಜಿಪುಣತೆಯ ಕುರಿತು ಒಂದು ಕುರ್‌ಆನ್ ವಾಕ್ಯದ ತಾತ್ಪರ್ಯ ತಿಳಿಸಿರಿ.
3. ದುಂದುವೆಚ್ಚ ಮಾಡುವವರನ್ನು ಕುರ್‌ಆನ್ ಯಾರ ಜತೆ ಸೇರಿಸಿದೆ?
4. ಪೂರ್ವಜರ ತ್ಯಾಗದ ಒಂದು ಉದಾಹರಣೆ ಕೊಡಿರಿ.
5. ಯರ್ಮೂಕ್ ಯುದ್ಧದಲ್ಲಿ ನೀರು ದಾನ ಮಾಡಿದ ಓರ್ವ ಸಹಾಬಿಯ ಹೆಸರು ತಿಳಿಸಿರಿ.
6. ಅನ್ಸಾರರು ಮುಹಾಜಿರರೊಡನೆ ಹೇಗೆ ವರ್ತಿಸಿದರು?

5
ಸಹನೆ ಮತ್ತು ಕ್ಷಮೆ

ಮಾನವರು ಇಲ್ಲಿ ಶಾಂತಿಯಿಂದ ಬಾಳಬೇಕು. ದುಃಖ ದುಮ್ಮಾನವಿರಬಾರದು. ಎಲ್ಲರೂ ಇದನ್ನು ಬಯಸುತ್ತಾರೆ. ಆದರೆ ಅದು ಇಲ್ಲಿ ಅಪರೂಪವಾಗಿದೆ. ಎಲ್ಲಿ ನೋಡಿದರೂ ಕಲಹ, ಗಲಭೆ, ಯುದ್ಧ. ಶಾಂತಿಯೇ ಇಲ್ಲ. ಹೀಗಾಗಲು ಕಾರಣವೇನು?

ಮಾನವರ ದುರ್ಗುಣವೇ ಎಲ್ಲ ಗಲಭೆಗಳ ಮೂಲ. ಕೆಲವರಿಗೆ ಬೇಗನೆ ಕೋಪ ಬರುತ್ತದೆ. ಕೋಪ ಬಂದರೆ ಕಣ್ಣು ಕಾಣಿಸುವುದಿಲ್ಲ. ಏನು ಬೇಕಾದರೂ ಹೇಳಬಹುದು. ಹೇಗೆ ಬೇಕಾದರೂ ವರ್ತಿಸಬಹುದು. ಇದು ಒಂದು ಮಹಾ ಗಲಭೆಯ ಆರಂಭ. ಏಕೆಂದರೆ, ಇತರರಿಗೆ ಅದನ್ನು ನೋಡಿ ಸುಮ್ಮನಿರಲಾಗುವುದಿಲ್ಲ. ಅವರೂ ಕೆರಳುತ್ತಾರೆ. ಉದ್ರಿಕ್ತರಾಗಿ ರಕ್ತ ಬಿಸಿಯಾಗುತ್ತದೆ. ಆ ಬಳಿಕದ ಕಥೆ ಹೇಳುವುದೇ ಬೇಡ. ಹೊಡೆತ ಬಡಿತ ಇರಿತ ಹತ್ಯೆ ಎಲ್ಲವೂ ನಡೆಯುತ್ತದೆ. ಇದರ ಮೂಲ ಯಾವುದು? ಒಬ್ಬನ ಕೋಪ.

ಕೋಪವು ಸ್ವಯಂ ದುರ್ಗುಣವಲ್ಲ. ತಪ್ಪು ಕಂಡಾಗ ಕೋಪ ಬರಬೇಕು. ಅದು ಸತ್ಯವಿಶ್ವಾಸಿಯ ಲಕ್ಷಣ. ಆದರೆ ಕೋಪವನ್ನು ತಾಳಿಕೊಳ್ಳಬೇಕು. ಇಲ್ಲದಿದ್ದರೆ ಅದು ದುರ್ಗುಣವಾಗುತ್ತದೆ. ನಾನಾ ರೀತಿಯ ಗಲಭೆಗಳಿಗೆ ಕಾರಣವಾಗುತ್ತದೆ. ಕೋಪ ಬಂದಾಗ, ಮಾತು-ವರ್ತನೆಗಳಲ್ಲಿ ಮಿತಿ ಮೀರುವುದು ಸತ್ಯವಿಶ್ವಾಸಿಯ ಗುಣವಲ್ಲ. ಪ್ರವಾದಿ(ಸ) ಹೀಗೆ ಹೇಳಿದ್ದಾರೆ.

لَيْسَ الْمُؤْمِنُ بِالطَّعَّانِ وَلَا اللَّعَّانِ وَلَا الْفَاحِشِ وَلَا الْبَذِيِ (ترمذی)

"ಸತ್ಯವಿಶ್ವಾಸಿಯು ಜನರನ್ನು ತೆಗಳುವುದಿಲ್ಲ, ಶಪಿಸುವುದಿಲ್ಲ, ಅಸಭ್ಯ ಮಾತಾಡುವುದಿಲ್ಲ, ಕೆಟ್ಟ ಮಾತು ಹೇಳುವುದಿಲ್ಲ."

(ತಿರ್ಮಿದಿ)

ಯೋಚಿಸಿ ನೋಡಿರಿ: ವಿನಾ ಕಾರಣ ಒಬ್ಬನು ನಿಮ್ಮನ್ನು ದೂರುತ್ತಾನೆ, ಬಯ್ಯುತ್ತಾನೆ ಅಥವಾ ವಂಚಿಸುತ್ತಾನೆ. ಸ್ವಾಭಾವಿಕವಾಗಿ ನಿಮಗೆ ಕೋಪ ಬರುತ್ತದೆ. ಆದರೂ ನೀವು ತಾಳ್ಮೆ ವಹಿಸುತ್ತೀರಿ. ನಿಮಗೆ ಪ್ರತೀಕಾರವೆಸಗಲು ಸಾಧ್ಯವಿದೆ.

ಆದರೂ ನೀವು ಆತನ ತಪ್ಪುಗಳನ್ನು ಕ್ಷಮಿಸುತ್ತೀರಿ. ಹಾಗಾದರೆ ಏನಾಗುವುದು? ಯಾವ ಜಗಳವೂ ಆಗುವುದಿಲ್ಲ. ಸ್ವಲ್ಪ ಸಮಯದ ಬಳಿಕ ಆತನಿಗೆ ತನ್ನ ಮಾತು ಮತ್ತು ವರ್ತನೆ ಅತಿಯಾಯಿತೆಂದು ಭಾಸವಾಗಬಹುದು. ನಿಮ್ಮ ಕಡುವೈರಿಯಾಗಿರುವ ಆತನು ಕೂಡಲೇ ಆಪ್ತಮಿತ್ರನಾಗಬಹುದು. ಕುರ್‌ಆನ್ ಹೇಳುತ್ತದೆ:

وَلَا تَسْتَوِي الْحَسَنَةُ وَلَا السَّيِّئَةُ ۚ ادْفَعْ بِالَّتِي هِيَ أَحْسَنُ فَإِذَا الَّذِي
بَيْنَكَ وَبَيْنَهُ عَدَاوَةٌ كَأَنَّهُ وَلِيٌّ حَمِيمٌ ﴿٣٤﴾

"ಸಂದೇಶವಾಹಕರೇ, ಒಳಿತು ಮತ್ತು ಕೆಡುಕು ಸರಿಸಮಾನವಲ್ಲ. ನೀವು ಕೆಡುಕನ್ನು ಅತ್ಯುತ್ತಮ ಒಳಿತಿನ ಮೂಲಕ ದೂರೀಕರಿಸಿರಿ. ನಿಮ್ಮೊಂದಿಗೆ ಹಗೆತನ ಕಟ್ಟಿಕೊಂಡವನು ನಿಮ್ಮ ಆಪ್ತ ಮಿತ್ರನಾಗಿ ಬಿಡುವುದನ್ನು ನೀವು ಕಾಣುವಿರಿ."

(ಹಾಮೀಮ್ ಅಸ್ಸಜ್‌ದಃ:34)

ಸಹನೆ, ತಾಳ್ಮೆ, ಕ್ಷಮೆ- ಇವು ಸತ್ಯವಿಶ್ವಾಸಿಯ ಗುಣಗಳಾಗಿವೆ. ಅದು ಮನೆ ಮತ್ತು ಊರಿನಲ್ಲಿ ಶಾಂತಿ ನೆಲೆಸುವ ಪ್ರಮುಖ ಮಾರ್ಗವೂ ಆಗಿದೆ. ಮಹಾನ್ ಪ್ರವಾದಿಗಳು ನಮಗೆ ಆ ಮಾದರಿಯನ್ನು ತೋರಿಸಿದ್ದಾರೆ. ಪ್ರವಾದಿವರ್ಯರನ್ನು(ಸ) ಮಕ್ಕಾದ ಮುಶ್ರಿಕರು ಎಷ್ಟೋ ಬಾರಿ ತೆಗಳಿದ್ದರು. ನಾನಾ ರೀತಿಯಿಂದ ಪೀಡಿಸಿದ್ದರು. ಆದರೆ ಪ್ರವಾದಿವರ್ಯರು(ಸ) ಒಮ್ಮೆಯಾದರೂ ಅವರನ್ನು ತೆಗಳಲಿಲ್ಲ, ಪೀಡಿಸಲಿಲ್ಲ, ಎಲ್ಲವನ್ನೂ ಸಹಿಸಿದರು. ಕೊನೆಗೆ, ಅವರನ್ನು ಹಿಂಸಿಸಿದ್ದವರೆಲ್ಲರೂ ಅವರ ಮುಂದೆ ಹೆದರಿ ಕಂಪಿಸುತ್ತಾ ನಿಲ್ಲಬೇಕಾಯಿತು. ಆದರೆ, ಪ್ರವಾದಿವರ್ಯರು(ಸ) ತಮ್ಮನ್ನು ಪೀಡಿಸಿದವರ ವಿರುದ್ಧ ಸೇಡು ತೀರಿಸಲಿಲ್ಲ. ಸಾಮೂಹಿಕ ಕ್ಷಮೆ ನೀಡಿ ಎಲ್ಲರನ್ನೂ ಮುಕ್ತಗೊಳಿಸಿದರು. ಪ್ರವಾದಿವರ್ಯರ(ಸ) ಈ ಗುಣವನ್ನು ಅಲ್ಲಾಹನು ಕುರ್‌ಆನಿನಲ್ಲಿ ಪ್ರಶಂಸಿಸಿದ್ದಾನೆ.

ತಪ್ಪು ಮತ್ತು ಅಪರಾಧಗಳು ಎಲ್ಲರಿಂದಲೂ ಸಂಭವಿಸುತ್ತದೆ. ನಮ್ಮ ತಪ್ಪು ವರ್ತನೆಗಳಿಂದ ಅಲ್ಲಾಹನು ಕುಪಿತನಾಗಬಾರದು, ಆತನು ನಮ್ಮನ್ನು ಕ್ಷಮಿಸಬೇಕೆಂದು ನಾವು ಬಯಸುವುದಿಲ್ಲವೇ? ಹಾಗೆಯೇ ಇತರರು ನಮಗೆ ಮಾಡುವ ತಪ್ಪುಗಳನ್ನು ನಾವೂ ಸಹಿಸಿ ಕ್ಷಮಿಸಬೇಕು. ಅಲ್ಲಾಹನು ಹೇಳಿದ್ದಾನೆ:

وَالْكَاظِمِينَ الْغَيْظَ وَالْعَافِينَ عَنِ النَّاسِ ۗ وَاللَّهُ يُحِبُّ الْمُحْسِنِينَ ﴿١٣٤﴾

"ಕೋಪವನ್ನು ನುಂಗಿಕೊಳ್ಳುತ್ತಾರೆ ಮತ್ತು ಇತರರ ಅಪರಾಧಗಳನ್ನು ಕ್ಷಮಿಸುತ್ತಾರೆ. ಇಂತಹ ಸಜ್ಜನರು ಅಲ್ಲಾಹನಿಗೆ ಅತ್ಯಂತ ಮೆಚ್ಚುಗೆಯುವರು."
(ಆಲಿ ಇಮ್ರಾನ್ : 134)

ನಮ್ಮ ಪೂರ್ವಿಕ ಮಹಾಪುರುಷರ ಮಾದರಿಯೂ ಅದೇ ಆಗಿತ್ತು. ಒಮ್ಮೆ ಪ್ರವಾದಿವರ್ಯರ(ಸ) ಮೊಮ್ಮಗ ಹುಸೈನ್‌ರ(ರ) ಪುತ್ರ ಝೈನುಲ್ ಆಬಿದೀನ್ ಮಸೀದಿಗೆ ಹೋಗುತ್ತಿದ್ದರು. ಆಗ ಒಬ್ಬರು ಅವರ ಮುಂದೆ ಬಂದು ಸಿಕ್ಕಾಪಟ್ಟೆ ಬೈದರು. ಆಗ ಜತೆಯಲ್ಲಿದ್ದವರು ಆತನನ್ನು ಹಿಡಿದು ದಂಡಿಸ ಹೊರಟರು. ಆದರೆ ಝೈನುಲ್ ಆಬಿದೀನ್ ಅದಕ್ಕೆ ಒಪ್ಪಲಿಲ್ಲ. ಅವರು ಹೇಳಿದರು.

"ಹೇ ಮಾನವಾ, ನನ್ನಲ್ಲಿ ನೀವು ಹೇಳಿದ್ದಕ್ಕಿಂತ ಹೆಚ್ಚು ದೋಷಗಳಿವೆ. ನಿಮಗೆ ನನ್ನ ಬಗ್ಗೆ ಸ್ವಲ್ಪ ಮಾತ್ರ ತಿಳಿದಿದೆ. ತಿಳಿಯದ್ದು ಇನ್ನೂ ಅಧಿಕವಿದೆ. ಬೇಕಿದ್ದರೆ ನಾನೇ ಅದನ್ನು ಹೇಳಿಕೊಡುತ್ತೇನೆ."

ಈ ಮಾತುಗಳನ್ನು ಕೇಳಿ ತೆಗಳಿದ ಆ ವ್ಯಕ್ತಿ ನಾಚಿ ತಲೆತಗ್ಗಿಸಿದ. ತಾನು ಮಾಡಿದ ತಪ್ಪಿಗೆ ಕ್ಷಮೆ ಯಾಚಿಸಿದ. ಝೈನುಲ್ ಆಬಿದೀನ್‌ರು ತನ್ನ ಅಂಗಿ ಮತ್ತು ಸಾವಿರ ಬೆಳ್ಳಿ ನಾಣ್ಯಗಳನ್ನು ನೀಡಿ ಆತನನ್ನು ಕಳುಹಿಸಿದರು. ಇದನ್ನು ಕಂಡಾಗ ಆತ ಹೇಳಿ ಬಿಟ್ಟ "ಈ ಯುವಕ ಪ್ರವಾದಿವರ್ಯರ(ಸ) ಪುತ್ರನೇ ಸೈ."

ಪ್ರಶ್ನೆಗಳು:

ಬಿಟ್ಟ ಪದಗಳನ್ನು ತುಂಬಿಸಿ.

١) لَيْسَ الْمُؤْمِنُ بِالطَّعَّانِ .... وَلَا الْبَذِيِ

وَلَا تَسْتَوِى الْحَسَنَةُ وَلَا السَّيِّئَةُ .... وَلِيٌّ حَمِيمٌ ﴿٣٤﴾

3. ಕಠೋರ ಹಗೆತನವಿರಿಸಿಕೊಂಡವರೊಡನೆ ಪ್ರವಾದಿ(ಸ) ಹೇಗೆ ವರ್ತಿಸಿದ್ದರು?

4. "ಈ ಯುವಕ ಪ್ರವಾದಿವರ್ಯರ(ಸ) ಪುತ್ರನೇ ಸೈ" ಸಂದರ್ಭ ಕೊಟ್ಟು ವಿವರಿಸಿ.

6

ವಿನಯ ಮತ್ತು ಅಹಂಕಾರ

ಅಲ್ಲಾಹನು ಮಾನವರಿಗೆ ಅನೇಕ ಸಾಮರ್ಥ್ಯಗಳನ್ನು ನೀಡಿದ್ದಾನೆ. ಮಾತ್ರವಲ್ಲ, ಭೂಮಿಯಲ್ಲಿ ಮಾನವನಷ್ಟು ಸಾಮರ್ಥ್ಯವಿರುವ ಬೇರೆ ಜೀವಿಯಿಲ್ಲ. ನೀವು ನೋಡಿಲ್ಲವೆ? ಮಾನವನಿಗಿಂತ ದೊಡ್ಡ ಹಾಗೂ ಬಲಶಾಲಿಯಾದ ಅನೇಕ ಪ್ರಾಣಿಗಳನ್ನು ಆತ ಪಳಗಿಸುತ್ತಾನೆ. ತನ್ನ ಕೆಲಸ ಕಾರ್ಯಗಳಿಗಾಗಿ ಉಪಯೋಗಿಸುತ್ತಾನೆ. ಇಂದು ಆತನಿಗೆ ಬೆಳಕು ಚೆಲ್ಲಿ ರಾತ್ರಿಯನ್ನು ಹಗಲಿನಂತೆ ಪ್ರಕಾಶಮಾನಗೊಳಿಸಲು, ನೀರಾವರಿಯಿಂದ ಮರುಭೂಮಿಗಳನ್ನೂ ಆತ ಫಲವತ್ತಾಗಿ ಮಾಡಬಲ್ಲನು. ಶಬ್ದಕ್ಕಿಂತ ವೇಗದಿಂದ ಆಕಾಶದಲ್ಲಿ ಹಾರಲು ಆತ ಕಲಿತಿದ್ದಾನೆ. ಇಂದು ಸಮುದ್ರದಾಳದಲ್ಲಿ ಬಹುದೂರ ಸಂಚರಿಸಲೂ ಆತನಿಗೆ ಸಾಧ್ಯವಾಗಿದೆ. ಭೂಮಿಯ ಒಂದು ತುದಿಯಿಂದ ಇನ್ನೊಂದು ತುದಿಯಲ್ಲಿರುವ ಮಿತ್ರನೊಡನೆ ನೇರವಾಗಿ ಮಾತನಾಡಬಹುದು. ಆತನನ್ನು ನೋಡಬಹುದು. ಹೆಚ್ಚೇಕೆ, ಇಂದು ಆತ ಭೂಮಿಯ ಹೊರಗಿನ ಗ್ರಹಗಳಲ್ಲಿಯೂ ಕಾಲಿರಿಸಿದ್ದಾನೆ. ಮುಂದೆ ಮಾನವ ಏನೆಲ್ಲ ಸಾಧಿಸಬಹುದೆಂದು ಇಂದು ನಮಗೆ ಹೇಳಲು ಸಾಧ್ಯವಿಲ್ಲ. ಸಂಶೋಧನೆಗಳು ಅಷ್ಟೊಂದು ವೇಗದಲ್ಲಿ ನಡೆಯುತ್ತಿವೆ.

ಒಂದೆಡೆ ಇಂತಹ ಸಾಮರ್ಥ್ಯಗಳಿದ್ದರೂ ಇನ್ನೊಂದೆಡೆ ಆತ ಸಂಪೂರ್ಣ ದುರ್ಬಲನಾಗಿದ್ದಾನೆ. ಕೆಲವೊಮ್ಮೆ ಆತ ಪಕ್ಕನೆ ಕಾಯಿಲೆ ಬೀಳುತ್ತಾನೆ. ಆತನಿಗೆ ಏನಾಯಿತು? ಇದನ್ನು ಕಂಡು ಹಿಡಿಯಲು ದೊಡ್ಡ ದೊಡ್ಡ ವೈದ್ಯರು ಹಲವು ಕಾಲ ಪರಿಶೀಲನೆ ನಡೆಸಬೇಕಾಗುತ್ತದೆ. ಆದರೂ ಕಾರಣ ತಿಳಿಯದ ಅದೆಷ್ಟೋ ರೋಗಗಳಿವೆ. ಇನ್ನು ಒಂದು ವೇಳೆ ಕಾರಣವನ್ನು ಕಂಡು ಹಿಡಿದರೂ ಎಲ್ಲ ರೋಗಗಳನ್ನು ಗುಣಪಡಿಸಲು ಸಾಧ್ಯವಿದೆಯೇ? ಇಂದು ಕೂಡಾ ಔಷಧ ಸಂಶೋಧಿಸಿಲ್ಲದ ಹಲವು ರೋಗಗಳಿವೆ. ಇಡೀ ಜಗತ್ತನ್ನು ಕೆಲವೇ ನಿಮಿಷಗಳಲ್ಲಿ ನಾಶ ಪಡಿಸಬಲ್ಲ ಮಾನವನಿಗೆ ಅತಿ ತುಚ್ಛವಾದ ಕೆಲವಾರು ರೋಗಾಣುಗಳನ್ನು ನಾಶಪಡಿಸಲು ಸಾಧ್ಯವಾಗುವುದಿಲ್ಲ. ಎಂತಹ ಅಸಹಾಯಕತೆ!

ಈಗ ಯೋಚಿಸಿ ನೋಡಿರಿ. ತನ್ನ ಸಾಮರ್ಥ್ಯಗಳ ಬಗ್ಗೆ ಮಾನವನು ಅಹಂಕಾರ ಪಡುವುದು ಸರಿಯೆ?

ಬುದ್ಧಿಯು, ಬಹುದೊಡ್ಡ ಶಕ್ತಿ ಮತ್ತು ಸಾಮರ್ಥ್ಯವಾಗಿದೆ. ಆದರೆ ಮಹಾ ಬುದ್ಧಿವಂತನು ಒಂದೊಮ್ಮೆ ಹುಚ್ಚನಾಗಿ ಬಿಡುತ್ತಾನೆ! ಮಹಾ ವಿದ್ವಾಂಸನು ಕೆಲವೊಮ್ಮೆ ಹಿಂದೆ ಕಲಿತುದನ್ನು ಜ್ಞಾಪಿಸಲಾಗದ ಮರೆಗುಳಿಯಾಗಿ ಬಿಡುತ್ತಾನೆ. ಇಂತಹ ಘಟನೆಗಳನ್ನು ನಾವು ಸಾಮಾನ್ಯವಾಗಿ ನೋಡುತ್ತಿದ್ದೇವೆ. ಅವುಗಳನ್ನು ತಡೆಯುವ ಸಾಮರ್ಥ್ಯ ಈ ಭೂಮಿಯಲ್ಲಿ ಯಾರಿಗಿದೆ?

ಇನ್ನೂ ನೋಡಿರಿ, ಸಹಸ್ರಾರು ಮಂದಿ ವರ್ಷಗಟ್ಟಲೆ ಕೆಲಸ ಮಾಡಿ ನಿರ್ಮಿಸಿದ ಕೋಟೆಕೊತ್ತಲಗಳು, ಭವ್ಯ ಬಂಗಲೆಗಳು ಕೆಲವೇ ನಿಮಿಷಗಳ ಭೂಕಂಪದಿಂದ ಉರುಳಿ ನೆಲಸಮವಾಗುತ್ತವೆ! ಇದನ್ನು ತಡೆಯಲು ಯಾರಿಗೆ ಸಾಧ್ಯವಿದೆ?

ಮಹಾ ಚಕ್ರವರ್ತಿಗಳು, ರಾಜಂದಿರು, ಆಡಳಿತಗಾರರು ಒಂದೇ ದಿನದಲ್ಲಿ ಅಧಿಕಾರ ಕಳೆದುಕೊಂಡು ಪ್ರಾಣ ಕೈಯಲ್ಲಿ ಹಿಡಿದುಕೊಂಡು ಪಲಾಯನ ಮಾಡಬೇಕಾಗುತ್ತದೆ! ಸಂಗ್ರಹಿಸಿಟ್ಟ ಶಸ್ತ್ರಗಳ ರಾಶಿಯಿಂದ ಯಾವ ಪ್ರಯೋಜನವೂ ಆಗುವುದಿಲ್ಲ.

ಹೀಗೆ ಮಾನವನ ಸಾಮರ್ಥ್ಯದ ಜತೆಯಲ್ಲಿ ಅಸಾಮರ್ಥ್ಯವೂ ಇದೆ. ಹೀಗಿರುತ್ತಾ ಸಾಮರ್ಥ್ಯಗಳಿಗಾಗಿ ಅಹಂಕಾರ ಪಡುವುದು ಸರಿಯೇ? ಸಾಮರ್ಥ್ಯಗಳೊಂದಿಗೆ ಅಸಾಮರ್ಥ್ಯಗಳನ್ನೂ ಅರಿಯುವವನೇ ಬುದ್ಧಿವಂತ. ಅಸಾಮರ್ಥ್ಯ ಎಲ್ಲರಲ್ಲಿಯೂ ಇದೆ. ಸರ್ವ ಸಾಮರ್ಥ್ಯಗಳಿರುವುದು ಅಲ್ಲಾಹನಿಗೆ ಮಾತ್ರ. ಪರಿಪೂರ್ಣರಲ್ಲದವರಿಗೆ ಅಹಂಕಾರ ಪಡುವ ಹಕ್ಕಿಲ್ಲ.

ಕುಂದು ಕೊರತೆಗಳಿಗಾಗಿ ಇತರರನ್ನು ಗೇಲಿಮಾಡುವುದು, ನಿಂದಿಸುವುದು, ಅಸಾಧ್ಯವಾದುದನ್ನು ಸಾಧ್ಯವೆಂದು ಭಾವಿಸುವುದು, ಅನಾವಶ್ಯಕ ಕಾರ್ಯಗಳಲ್ಲಿ ಕೈ ಹಾಕುವುದು, ತಿಳುವಳಿಕೆಯಿಲ್ಲದೆ ತೀರ್ಪು ನೀಡುವುದು, ವಿವೇಕವಂತರ ಉಪದೇಶಗಳಿಗೆ ಕಿವಿಗೊಡದಿರುವುದು, ಹಿರಿಯರನ್ನು ಗೌರವಿಸದಿರುವುದು. ಇವು ಅಹಂಕಾರದ ಲಕ್ಷಣಗಳಾಗಿವೆ. ಅಲ್ಲಾಹನು ಹೀಗೆ ಹೇಳಿರುತ್ತಾನೆ:

وَلَا تُصَعِّرْ خَدَّكَ لِلنَّاسِ وَلَا تَمْشِ فِي الْأَرْضِ مَرَحًا ۖ إِنَّ اللَّهَ لَا يُحِبُّ كُلَّ مُخْتَالٍ فَخُورٍ ۝

"ಜನರೊಡನೆ ಮುಖ ತಿರುಗಿಸಿ ಮಾತಾಡಬೇಡ. ಭೂಮಿಯ ಮೇಲೆ ದರ್ಪದಿಂದ ನಡೆಯಬೇಡ. ದುರಭಿಮಾನ ಮತ್ತು ಅಹಂಕಾರ ಪಡುವವನನ್ನು ಅಲ್ಲಾಹನು ಮೆಚ್ಚುವುದಿಲ್ಲ."

(ಲುಕ್ಮಾನ್ : 18)

ಕೆಲವರು ತಮ್ಮಲ್ಲಿರುವ ಸಾಮರ್ಥ್ಯಗಳಿಗಾಗಿ ಅಹಂಕಾರ ಪಡುತ್ತಾರೆ. ಆದರೆ ಅವರಿಗೆ ಈ ಸಾಮರ್ಥ್ಯ ಹೇಗೆ ದೊರೆತಿದೆ? ಅವರು ಸ್ವತಃ ಅದನ್ನು ಸಾಧಿಸಿದ್ದಾರೆಯೇ? ಇಲ್ಲ, ಅಲ್ಲಾಹನು ಅದನ್ನು ಅವರಿಗೆ ನೀಡಿದ್ದಾನೆ. ಹಾಗಾದರೆ ಅಧಿಕ ಸಾಮರ್ಥ್ಯ ದೊರೆತವರು ಅಲ್ಲಾಹನ ಮುಂದೆ ಅಧಿಕ ವಿನಯವಂತರಾಗಬೇಕು. ವಿನಯವೇ ಮುಸ್ಲಿಮನ ಗುಣ. ಅಲ್ಲಾಹನು ಹೇಳಿದ್ದಾನೆ:

وَعِبَادُ الرَّحْمٰنِ الَّذِيْنَ يَمْشُوْنَ عَلَى الْاَرْضِ هَوْنًا

"ಪರಮ ದಯಾಮಯನಾದ ಅಲ್ಲಾಹನ ದಾಸರು ಭೂಮಿಯಲ್ಲಿ ವಿನಯದಿಂದ ನಡೆಯುವವರಾಗಿದ್ದಾರೆ." (ಅಲ್ ಫುರ್ಕಾನ್ : 63)

ಹೆಚ್ಚು ಅಧಿಕಾರ ಶಕ್ತಿ ದೊರೆತಾಗ ಪ್ರವಾದಿಯವರು(ಸ) ಅತ್ಯಂತ ವಿನಯಶೀಲರಾಗಿದ್ದರು. ಯಾವ ಕ್ರಮ ಕೈಗೊಳ್ಳುವರೋ ಎಂದು ಹೆದರಿ ಕಂಪಿಸುತ್ತಿದ್ದ ಓರ್ವರೊಡನೆ ಪ್ರವಾದಿ(ಸ) ಹೀಗೆ ಹೇಳಿದ್ದರು: "ಹೆದರಬೇಡಿ, ನಾನು ಒಣ ಮಾಂಸ ತಿನ್ನುತ್ತಿದ್ದ ಓರ್ವ ಕುರೈಶಿ ಮಹಿಳೆಯ ಮಗ."

ನೋಡಿದಿರಾ, ಅತ್ಯಂತ ಶ್ರೇಷ್ಠರಾದ ಪ್ರವಾದಿವರ್ಯರ(ಸ) ವಿನಯ. ಹೀಗೆ ಇಸ್ಲಾಮೀ ಇತಿಹಾಸದಲ್ಲಿ ಖ್ಯಾತರಾದ ಮಹಾಪುರುಷರೆಲ್ಲರೂ ಬಹಳ ವಿನಯಶೀಲರಾಗಿದ್ದರು.

ಅಬೂಬಕರ್ ಸಿದ್ದೀಕ್‌ರ ಬಗ್ಗೆ ಓದಿರುವಿರಲ್ಲವೇ. ಮುಸ್ಲಿಮರ ಪ್ರಥಮ ಖಲೀಫಾ. ಅವರ ನೆರೆಕರೆಯಲ್ಲಿ ಓರ್ವ ಅನಾಥ ಮುದುಕಿ ವಾಸವಾಗಿದ್ದಳು. ಅಬೂಬಕರ್‌ರು(ರ) ದಿನಾಲೂ ಆಕೆಯ ಆಡುಗಳ ಹಾಲು ಕರೆದು ಕೊಡುತ್ತಿದ್ದರು. ಅವರು ಖಲೀಫರಾಗಿ ಆಯ್ಕೆಯಾದಾಗ ಈ ಸಹಾಯ ನಿಲ್ಲಬಹುದೆಂದು ಮುದುಕಿ ಭಾವಿಸಿದ್ದಳು. ಆದರೆ ಆಕೆಯ ಊಹೆ ತಪ್ಪಾಯಿತು. ಮರುದಿನವೂ ಅವರು ಬಂದು ಬಾಗಿಲು ತಟ್ಟಿದರು. ಪುಟ್ಟ ಬಾಲಕಿ ಬಾಗಿಲು ತೆರೆದಳು: ಅಬೂಬಕರ್ ಸಿದ್ದೀಕ್‌ರನ್ನು ನೋಡಿ ಆಕೆ ಹೇಳಿದಳು: "ಅಮ್ಮಾ ಹಾಲಿನವ" ಕೂಡಲೇ ತಾಯಿ ಓಡಿ ಬಂದು ತಿದ್ದಿದಳು: "ಮಗಳೇ, ಅದು ನಮ್ಮ ಖಲೀಫಾ, ಮುಸ್ಲಿಮರ ಆಡಳಿತಗಾರ."

ಇನ್ನೊಮ್ಮೆ ಓರ್ವ ಮುದುಕಿಯು ಆಹಾರ ಸಾಮಗ್ರಿಗಳಿದ್ದ ಒಂದು ಚೀಲವನ್ನು ಹೊತ್ತು ನಡೆಯುತ್ತಿದ್ದಳು. ಖಲೀಫಾ ಉಮರ್(ರ) ಅದನ್ನು ನೋಡಿದರು. ಅವರು ಕೂಡಲೇ ಹೋಗಿ ಅದನ್ನು ಎತ್ತಿಕೊಂಡರು. ಆಕೆಯ ಮನೆ ತಲಪಿದ ಬಳಿಕ ಅದನ್ನು ಆಕೆಗೆ ಮರಳಿಸಿದರು. ಆಗ ಆ ಮುದುಕಿ ಹೀಗೆಂದರು: "ಮಗನೇ, ಅಲ್ಲಾಹನು ನಿನಗೆ ಅರ್ಹ ಪ್ರತಿಫಲವನ್ನು ನೀಡಲಿ. ಖಲೀಫನಾಗಲು ಉಮರ್‌ಗಿಂತ ನೀನೇ ಯೋಗ್ಯ."

ಇದನ್ನು ಕೇಳಿ ಉಮರ್(ರ) ಮುಗುಳ್ನಕ್ಕರು. ನೋಡಿದಿರಾ, ಆ ಮಹಾಪುರುಷರ ವಿನಯವಂತಿಕೆ.

"ವಿನಯದಿಂದ ನಮ್ಮ ಗೌರವ ಅಥವಾ ಸ್ಥಾನಮಾನ ಕಡಿಮೆಯಾಗುವುದಿಲ್ಲ. ಯಾವ ದಾನವೂ ಸಂಪತ್ತಿನಲ್ಲಿ ಕೊರತೆಯುಂಟು ಮಾಡಿಲ್ಲ, ಅಲ್ಲಾಹನು ಕ್ಷಮೆಯನ್ನು ಕೈಗೊಂಡವರ ಯಾರ ಪ್ರತಿಷ್ಠೆಯನ್ನೂ ಹೆಚ್ಚಿಸದೆ ಬಿಟ್ಟಿಲ್ಲ. ಅಲ್ಲಾಹನಿಗಾಗಿ ವಿನೀತರಾದ ಯಾರನ್ನೂ ಅಲ್ಲಾಹನು ಉನ್ನತಗೊಳಿಸದೆ ಬಿಟ್ಟಿಲ್ಲ."

(ಮುಸ್ಲಿಮ್)

ಪ್ರಶ್ನೆಗಳು:

1. ಅಹಂಕಾರದ ಕೆಲವು ಲಕ್ಷಣಗಳನ್ನು ಹೇಳಿರಿ.
2. "ಹೆದರಬೇಡಿ, ನಾನು ಒಣ ಮಾಂಸ ತಿನ್ನುವ ಓರ್ವ ಕುರೈಶಿ ಮಹಿಳೆಯ ಮಗ" - ಸಂದರ್ಭ ಕೊಟ್ಟು ವಿವರಿಸಿರಿ.
3. ಅಬೂಬಕರ್‌ರ(ರ) ವಿನಯಶೀಲತೆಯನ್ನು ಸೂಚಿಸುವ ಒಂದು ಘಟನೆಯನ್ನು ತಿಳಿಸಿರಿ.
4. ಭರ್ತಿಗೊಳಿಸಿರಿ.

وَعِبَادُ الرَّحْمٰنِ .... هَوْنًا

7
ಅನ್ಯಾಯವೆಸಗಬಾರದು

ಅಲ್ಲಾಹನು ನಮಗೆ ಆರೋಗ್ಯ ನೀಡಿದ್ದಾನೆ. ಅದೊಂದು ಮಹಾ ಅನುಗ್ರಹ. ಆದ್ದರಿಂದ ನಾವು ಇತರರಿಗೆ ಉಪಕಾರ ಮಾಡಬೇಕು. ಇದು ನ್ಯಾಯ. ಇನ್ನು ನಾವು ಅದರಿಂದ ಬೇರೆಯವರಿಗೆ ತೊಂದರೆ ಕೊಟ್ಟರೆ ಇದು ಮಹಾ ಅನ್ಯಾಯ. ಹೀಗೆ ಬುದ್ಧಿಶಕ್ತಿ, ಸಂಪತ್ತು, ಪ್ರಭಾವ, ಅಧಿಕಾರ ಇತ್ಯಾದಿ ಅನುಗ್ರಹಗಳೂ ಅದರಿಂದ ಹೊರತಲ್ಲ. ಆದರೆ ಅಲ್ಲಾಹನು ಜನರ ಉಪಕಾರಕ್ಕಾಗಿ ಈ ಎಲ್ಲ ಸಾಮರ್ಥ್ಯಗಳನ್ನು ನೀಡಿದ್ದಾನೆ. ಪ್ರವಾದಿ(ಸ) ಹೀಗೆಂದಿದ್ದಾರೆ:

اِتَّقُوا الظُّلْمَ فَاِنَّ الظُّلْمَ ظُلُمَاتٌ يَوْمَ الْقِيٰمَةِ (مسلم)

"ನೀವು ಅನ್ಯಾಯದ ಬಗ್ಗೆ ಎಚ್ಚರಿಕೆ ವಹಿಸಿರಿ. ಏಕೆಂದರೆ ಅನ್ಯಾಯವು ಅಂತ್ಯದಿನದ ಅಂಧಕಾರಗಳಾಗಿವೆ."

(ಮುಸ್ಲಿಮ್)

ಅಪರಾಧಗಳನ್ನು ಮಾಡಿದ ಮಾನವನು ಹೆದರಿ ನಡುಗುತ್ತಾ ಪರಲೋಕಕ್ಕೆ ಹೋಗುತ್ತಾನೆ. ಅಲ್ಲಿ ಆತ ಇಹಲೋಕದಲ್ಲಿ ಮಾಡಿದ ಸತ್ಕರ್ಮಗಳ ಮೇಲೆ ಮಾತ್ರ ಭರವಸೆಯಿರಿಸಬಹುದಾಗಿದೆ. ಆದರೆ ಅಲ್ಲಾಹನ ವಿಚಾರಣೆ ಆರಂಭವಾದಾಗ ಆತನಿಗೆ ವಾಸ್ತವಿಕತೆ ಮನವರಿಕೆಯಾಗುತ್ತದೆ. ಆತ ಯಾರಿಗೆ ಅನ್ಯಾಯವೆಸಗಿರುವನೋ ಅವರಿಗೆ ಆ ಸತ್ಕರ್ಮಗಳ ಪ್ರತಿಫಲವನ್ನು ಹಂಚಲಾಗುವುದು. ಕೈಯಲ್ಲಿದ್ದ ಬೆಳಕು ಹೋಗಿ ಬಿಡುತ್ತದೆ. ಪಾರಾಗುವ ಯಾವ ಮಾರ್ಗವೂ ಇಲ್ಲ. ಎಲ್ಲೆಡೆ ಕತ್ತಲೆ, ಕಾರ್ಗತ್ತಲೆ! ಪ್ರವಾದಿವರ್ಯರು(ಸ) ಅದನ್ನು ಹೀಗೆ ವಿವರಿಸಿದ್ದಾರೆ:

"ನನ್ನ ಸಮುದಾಯದಲ್ಲಿ ಎಲ್ಲವನ್ನೂ ಕಳೆದುಕೊಂಡು ದಿವಾಳಿಯಾದವನು ಯಾರೆಂದು ತಿಳಿದಿದೆಯೇ? ಒಬ್ಬನು ಅಂತ್ಯ ದಿನದಲ್ಲಿ ನಮಾಝ್, ಉಪವಾಸ ಮತ್ತು ಝಕಾತ್‌ನೊಂದಿಗೆ ಬರುತ್ತಾನೆ. ಆದರೆ, ಆತ ಒಬ್ಬನನ್ನು ಬೈದಿದ್ದನು, ಒಬ್ಬನ ಮೇಲೆ ಸುಳ್ಳಾರೋಪ ಹೊರಿಸಿದ್ದನು, ಒಬ್ಬನ ಸಂಪತ್ತನ್ನು ಅನ್ಯಾಯವಾಗಿ ಕಬಳಿಸಿದ್ದನು, ಒಬ್ಬನ ರಕ್ತ ಹರಿಸಿದ್ದನು, ಒಬ್ಬನಿಗೆ ಹೊಡೆದಿದ್ದನು. ಆದ್ದರಿಂದ

ಆತನ ಒಳಿತುಗಳನ್ನು ಅವರೆಲ್ಲರಿಗೂ ಹಂಚಲಾಗುವುದು. ಹೀಗೆ ಆತನ ಅಪರಾಧಗಳು ಮುಗಿಯುವುದಕ್ಕಿಂತ ಮುಂಚೆ ಒಳಿತುಗಳು ಮುಗಿದು ಹೋದರೆ ಅವರ ಅಪರಾಧಗಳನ್ನು ಆತನ ಮೇಲೆ ಹೇರಲಾಗುವುದು. ಅನಂತರ ಅವನನ್ನು ನರಕಕ್ಕೆ ಎಸೆಯಲಾಗುವುದು."

(ಮುಸ್ಲಿಮ್)

ಅಲ್ಲಾಹನು ಮರ್ದಿತ ದುರ್ಬಲರ ಜತೆಗಿರುತ್ತಾನೆ; ಈ ಲೋಕದಲ್ಲಿಯೂ ಪರಲೋಕದಲ್ಲಿಯೂ ಅವರ ಪ್ರಾರ್ಥನೆಯನ್ನು ಅಲ್ಲಾಹನು ಬಹಳ ಬೇಗನೆ ಅಂಗೀಕರಿಸುತ್ತಾನೆ. ಪ್ರವಾದಿ(ಸ) ಹೇಳಿದ್ದಾರೆ:

اِتَّقِ دَعْوَةَ الْمَظْلُوْمِ فَاِنَّهُ لَيْسَ بَيْنَهَا وَبَيْنَ اللهِ حِجَاب

(بخاری، مسلم)

"ಮರ್ದಿತನ ಪ್ರಾರ್ಥನೆಯ ಬಗ್ಗೆ ಎಚ್ಚರಿಕೆ ವಹಿಸಿರಿ. ಏಕೆಂದರೆ, ಆ ಪ್ರಾರ್ಥನೆ ಮತ್ತು ಅಲ್ಲಾಹನ ಮಧ್ಯೆ ಯಾವ ತಡೆಯೂ ಇಲ್ಲ."

(ಬುಖಾರಿ, ಮುಸ್ಲಿಮ್)

ಮುಸ್ಲಿಮನು ಅನ್ಯಾಯವೆಸಗಬಾರದು. ಮಾತ್ರವಲ್ಲ ಇತರರು ಅನ್ಯಾಯವೆಸಗುವುದನ್ನು ನೋಡಿ ಸುಮ್ಮನಿರಬಾರದು. ಅಕ್ರಮಿಸಲ್ಪಟ್ಟವನ ಜತೆಗೂಡಿ ಅಕ್ರಮಿಯನ್ನು ಹಿಂಜರಿಸಬೇಕು. ಇಲ್ಲದಿದ್ದರೆ ಊರಿನಲ್ಲಿ ಅನ್ಯಾಯ ಹೆಚ್ಚುತ್ತದೆ. ದುರ್ಬಲರಿಗೆ ರಕ್ಷಣೆಯಿಲ್ಲದಂತಾಗುತ್ತದೆ. ಇದು ಅಲ್ಲಾಹನ ಕೋಪಕ್ಕೂ ಆ ಊರಿನ ನಾಶಕ್ಕೂ ಹೇತುವಾಗುತ್ತದೆ. ಅಲ್ಲಾಹನು ಹೇಳುತ್ತಾನೆ:

وَاتَّقُوْا فِتْنَةً لَّا تُصِيْبَنَّ الَّذِيْنَ ظَلَمُوْا مِنْكُمْ خَآصَّةً

"ಯಾವುದರ ಪರಿಣಾಮವು ನಿಮ್ಮ ಪೈಕಿ ಪಾಪ ಮಾಡಿದವರಿಗೆ ಮಾತ್ರ ಸೀಮಿತವಾಗಿರಲಾರದೋ ಆ 'ಪೀಡನ'ದಿಂದ ನೀವು ದೂರವಿರಿ."

(ಅಲ್ ಅನ್‌ಫಾಲ್ :25)

ಮರಣ ಸಮೀಪಿಸಿದಾಗ ಪ್ರವಾದಿಯವರನ್ನು(ಸ) ಕಾಡುತ್ತಿದ್ದ ವಿಷಯವೇನೆಂದು ನಿಮಗೆ ತಿಳಿದಿದೆಯೇ? ಯಾರಿಗಾದರೂ ತಮ್ಮಿಂದ ಅನ್ಯಾಯವಾಗಿದೆಯೇ ಎಂಬ ಭೀತಿ! ಅದಕ್ಕಾಗಿ ಅವರು ಇಬ್ಬರು ಸಹಾಬಿಗಳ ಭುಜ ಹಿಡಿದು ಮಸೀದಿಗೆ ಬಂದರು. ಪೀಠದಲ್ಲಿ ಕುಳಿತು ಹೇಳಿದರು:

"ಜನರೇ! ನಾನು ಯಾರ ಬೆನ್ನಿಗಾದರೂ ಹೊಡೆದಿದ್ದರೆ, ಇದೋ ನನ್ನ ಬೆನ್ನು, ಅದಕ್ಕೆ ಪ್ರತಿಯಾಗಿ ಆತನು ನನಗೆ ಹೊಡೆಯಲಿ. ನಾನು ಯಾರನ್ನಾದರೂ ಬೈದು

ಗೌರವಕ್ಕೆ ಕುಂದು ಮಾಡಿದ್ದರೆ, ನನ್ನ ಮಾನವಿದೋ ನಿಮ್ಮ ಮುಂದಿದೆ. ಆತನು ಪ್ರತೀಕಾರ ಕೈಗೊಳ್ಳಲಿ. ಯಾರ ಹಣವನ್ನಾದರೂ ಅನ್ಯಾಯವಾಗಿ ತೆಗೆದುಕೊಂಡಿದ್ದರೆ, ಇದೋ ನನ್ನ ಹಣ, ಅದರಿಂದ ತೆಗೆದುಕೊಳ್ಳಲಿ, ಅದರಿಂದಾಗಿ ನನಗೆ ವೈರವುಂಟಾದೀತೆಂದು ಯಾರೂ ಅಂಜಬೇಡಿ. ಅದು ನನ್ನ ಗುಣವಲ್ಲ. ನನ್ನ ಬಳಿ ಯಾರದಾದರೂ ಹಕ್ಕುಗಳಿದ್ದರೆ, ಅದನ್ನು ನನ್ನಿಂದ ಪಡೆದುಕೊಳ್ಳುವಾತನನ್ನು ನಾನು ಅತ್ಯಧಿಕ ಮೆಚ್ಚುತ್ತೇನೆ. ಹಾಗಾದರೆ ನಾನು ನನ್ನ ಪ್ರಭುವನ್ನು ಶುದ್ಧ ಮನಸ್ಸಿನಿಂದ ಭೇಟಿಯಾಗಬಹುದು."

ನೋಡಿದಿರಾ, ಅತ್ಯಂತ ಪರಿಶುದ್ಧರಾದ ಪ್ರವಾದಿಯವರ(ಸ) ಸ್ಥಿತಿ. ಅಲ್ಲಾಹನನ್ನು ಭೇಟಿಯಾಗುವುದಕ್ಕಿಂತ ಮುಂಚೆ ತನ್ನಿಂದ ಅನ್ಯರಿಗೆ ಅನ್ಯಾಯವಾಗಿದೆಯೇ ಎಂದು ಅವರು ಹೆದರುತ್ತಾರೆ. ಹೀಗಿರುತ್ತಾ, ಅನ್ಯಾಯವೆಸಗಿ ಮರಣ ಹೊಂದುವ ಬಗ್ಗೆ ನಾವು ಎಷ್ಟೊಂದು ಹೆದರಬೇಕಾಗಿದೆ!

ಗತ ಮಹಾಪುರುಷರ ಸ್ಥಿತಿಯೂ ಇದೇ ಆಗಿತ್ತು. ಒಮ್ಮೆ ಖಲೀಫಾ ಉಮರ್‌ರಿಗೆ(ರ) ಉಬಯ್ಯ್ ಬಿನ್ ಕಅಬ್‌ರೊಂದಿಗೆ ವಿವಾದವುಂಟಾಯಿತು. ಇಬ್ಬರೂ ವಿವಾದವನ್ನು ಮದೀನಾದ ಕಾಝಿಯವರ ಮುಂದಿರಿಸಿದರು. ಉಮರ್(ರ) ಮುಸ್ಲಿಮರ ಖಲೀಫರಲ್ಲವೇ! ಕಾಝಿಯವರು ಅವರಿಗೆ ಪ್ರತ್ಯೇಕವಾಗಿ ಸಲಾಮ್ ಹೇಳಿ ಸ್ವಾಗತಿಸಿದರು. ಅವರಿಗೆ ಕುಳಿತುಕೊಳ್ಳಲು ವಿಶೇಷ ವ್ಯವಸ್ಥೆ ಮಾಡಿದರು. ಹೀಗೆ ಉಬಯ್ಯ್‌ರು(ರ) ನ್ಯಾಯಾಲಯದ ನಿಬಂಧನೆಯನ್ವಯ ಉಮರ್‌ರೊಡನೆ(ರ) ಸತ್ಯಪ್ರತಿಜ್ಞೆ ಮಾಡುವಂತೆ ತಿಳಿಸಿದರು. ಆಗ ಕಾಝಿಯವರು ಹೇಳಿದರು: ಅಮೀರುಲ್ ಮೂಮಿನೀನ್‌ರನ್ನು ಸತ್ಯಪ್ರತಿಜ್ಞೆಯ ಕ್ರಮದಿಂದ ಹೊರತು ಪಡಿಸಿರಿ.

ಮಾತಿನಲ್ಲಿ ನಂಬಿಕೆಯಿಲ್ಲದಿರುವುದರಿಂದ ಸತ್ಯಪ್ರತಿಜ್ಞೆ ಮಾಡಿಸಲಾಗುತ್ತದಷ್ಟೆ. ಅಮೀರುಲ್ ಮೂಮಿನೀನ್‌ರ ಮಾತನ್ನು ನಂಬದವರು ಯಾರಿರಬಹುದು! ಕಾಝಿಯವರು ಹಾಗೆ ಭಾವಿಸಿದ್ದರು. ಆದರೆ, ನ್ಯಾಯಾಲಯವು ಅದನ್ನು ಪರಿಗಣಿಸಬೇಕಾಗಿರಲಿಲ್ಲ. ಅಲ್ಲಿ ವಾದಿಯೂ ಪ್ರತಿವಾದಿಯೂ ಸಮಾನರು. ಕಾನೂನು ಇಬ್ಬರಿಗೂ ಸಮಾನವಾಗಿರಬೇಕು. ಒಬ್ಬರಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡುವುದು ನ್ಯಾಯವಲ್ಲ. ಆದ್ದರಿಂದ ಕಾಝಿಯ ಮಾತುಗಳನ್ನು ಕೇಳಿ ಉಮರ್‌ರಿಗೆ(ರ) ಕೋಪ ಬಂತು. ಅವರು ಹೀಗೆಂದರು:

"ಇಂದಿನಿಂದ ನೀವು ಅಕ್ರಮಿಯಾಗಿದ್ದೀರಿ. ಅಮೀರುಲ್ ಮೂಮಿನೀನ್‌ರಿಗೆ ಸಲಾಮ್! ಅಮೀರುಲ್ ಮೂಮಿನೀನ್ ಕುಳಿತುಕೊಳ್ಳಿ! ಅಮೀರುಲ್ ಮೂಮಿನೀನ್‌ರನ್ನು ಹೊರತು ಪಡಿಸಿರಿ! ಇವೆಲ್ಲ ನ್ಯಾಯವೇ?"

ನೋಡಿದಿರಾ, ನ್ಯಾಯದಲ್ಲಿ ತನಗೆ ಅನೂಕೂಲವಾಗಿ ಸ್ವಲ್ಪಂಶ ಅನ್ಯಾಯ ಹೇರುವುದನ್ನೂ ಅವರು ಮೆಚ್ಚುವುದಿಲ್ಲ. ಎಂತಹ ಉನ್ನತ ಮಾದರಿ!

ಪ್ರಶ್ನೆಗಳು:

1. ಸಾರಾಂಶ ವಿವರಿಸಿರಿ.

   فَاِنَّ الظُّلْمَ ظُلُمَاتٌ يَوْمَ الْقِيَمَةِ

2. ಅನ್ಯಾಯವೆಸಗಿದಾತನು ಪರಲೋಕದಲ್ಲಿ ಅನುಭವಿಸುವ ಇಮ್ಮಡಿ ನಷ್ಟ ಯಾವುದು?
3. ಮರಣ ಸಮೀಪಿಸಿದಾಗ ಪ್ರವಾದಿಯವರನ್ನು(ಸ) ಕಾಡಿದ ಚಿಂತೆ ಯಾವುದು?
4. "ಇಂದಿನಿಂದ ನೀವು ಅಕ್ರಮಿಯಾಗಿದ್ದೀರಿ" ಎಂದು ಉಮರ್‌ರು(ರ) ಕಾಝಿಯವರ ಕುರಿತು ಹೇಳಲು ಕಾರಣವೇನು?
5. ಭರ್ತಿಗೊಳಿಸಿರಿ.

   وَاتَّقُوْا فِتْنَةً .... خَآصَّةً

8
ಅಸೂಯೆ ಮತ್ತು ಚಾಡಿ

ಅಸೂಯೆಯು ಒಂದು ಮಹಾ ದುರ್ಗುಣವಾಗಿದೆ. ಸತ್ಯವಿಶ್ವಾಸಿಗಳು ಪರಸ್ಪರ ಸ್ನೇಹ ಸೌಹಾರ್ದದಿಂದ ಬಾಳಬೇಕಾಗಿದೆ. ಆದರೆ ಅಸೂಯೆಯು ಆ ಸೌಹಾರ್ದವನ್ನು ಕೆಡಿಸುತ್ತದೆ. ಸಹೋದರರ ಮಧ್ಯೆ ಶತ್ರುತ್ವ ಮತ್ತು ದ್ವೇಷವನ್ನು ಬೆಳೆಸುತ್ತದೆ. ಜಗಳ-ಗೊಂದಲಗಳಿಗೆ ಕಾರಣವಾಗುತ್ತದೆ. ಅಸೂಯೆಯು ಅಂತಹ ವಿಷಬೀಜ. ಆದ್ದರಿಂದ, ಅಸೂಯೆಗಾರನ ಉಪಟಳದಿಂದ ಅಭಯ ಯಾಚಿಸಬೇಕೆಂದು ಅಲ್ಲಾಹನು ಕಲಿಸಿದ್ದಾನೆ. ಕುರ್‌ಆನ್ ಹೇಳುತ್ತದೆ:

وَمِنْ شَرِّ حَاسِدٍ إِذَا حَسَدَ ۝

"ಮತ್ಸರಿಯು ಮತ್ಸರ ಪಡುವಾಗ ಅವನ ಕೇಡಿನಿಂದ. (ಅಭಯ ಯಾಚಿಸುತ್ತೇನೆ). **(ಅಲ್ ಫಲಕ್ :5)**

ಅಸೂಯೆ ಎಂದರೇನು? ಸಹೋದರನಿಗೆ ದೊರೆಯುವ ಅನುಗ್ರಹದ ಬಗ್ಗೆ ಸಂತೋಷ ಪಡದಿರುವುದು. ಹೇಗಾದರೂ ಅದನ್ನು ಆತ ಕಳೆದುಕೊಳ್ಳಬೇಕೆಂದು ಬಯಸುವುದು. ಇದೊಂದು ದುಷ್ಟ ಭಾವನೆಯಾಗಿದೆ. ಆ ರೀತಿ ಭಾವಿಸುವವನನ್ನೇ ಅದು ಮೊದಲು ನಾಶಪಡಿಸುತ್ತದೆ. ಆತನ ಆರೋಗ್ಯವನ್ನೂ ನೆಮ್ಮದಿಯನ್ನೂ ಕೆಡಿಸುತ್ತದೆ. ಅನಂತರ ಅದು ಇತರರನ್ನು ಪೀಡಿಸುತ್ತದೆ. ಹೀಗೆ ಅದು ಸಮೂಹವನ್ನೇ ನಾಶಪಡಿಸುತ್ತದೆ.

ಅದು ಹೇಗೆಂದು ತಿಳಿಯಿತೇ? ಹಗೆತನ ಮತ್ತು ದ್ವೇಷವು ಅಸೂಯೆಯ ಒಡನಾಡಿಗಳಾಗಿವೆ. ಆದ್ದರಿಂದ ಅಸೂಯೆಗಾರನು ಯಾವಾಗಲೂ ಇತರರ ನಾಶದ ಬಗ್ಗೆ ಆಲೋಚಿಸುತ್ತಿರುತ್ತಾನೆ. ಅದಕ್ಕಾಗಿ ಆತನ ಬಗ್ಗೆ ಸುಳ್ಳು ಹೇಳುತ್ತಾನೆ. ಆತನ ಮೇಲೆ ಸುಳ್ಳಾರೋಪ ಹೊರಿಸುತ್ತಾನೆ. ಎಲ್ಲ ರೀತಿಯಿಂದಲೂ ಆತನಿಗೆ ತೊಂದರೆ ಕೊಡುತ್ತಾನೆ. ಹಗೆಯಿರಿಸಿದಾತನು ಸತ್ಯ-ನ್ಯಾಯವನ್ನು ನೋಡುತ್ತಾನೆಯೇ! ಎದುರಾಳಿಯನ್ನು ಸದೆಬಡಿಯುವ ಮಾರ್ಗದ ಹೊರತು ಬೇರೆ ಯಾವುದೂ ಆತನಿಗೆ ಕಾಣಿಸುವುದಿಲ್ಲ. ಇದರಿಂದಾಗಿ ಇತರರ ಜತೆ ಆತನೂ ನಾಶ ಹೊಂದುತ್ತಾನೆ.

ಅಸೂಯೆಗಾರನಿಗೆ ಯಾವ ಒಳಿತನ್ನೂ ಮಾಡಲು ಸಾಧ್ಯವಿಲ್ಲ. ಆತನ ಮನದಲ್ಲಿ ಇತರರ ಬಗ್ಗೆ ದ್ವೇಷವೇ ತುಂಬಿರುತ್ತದೆ. ಆದ್ದರಿಂದ ಆತ ಇತರರಿಗೆ ಏನಾದರೂ ಉಪಕಾರ ಮಾಡುವುದಾದರೂ ಹೇಗೆ? ಸೃಷ್ಟಿಕರ್ತ ಮತ್ತು ಆತನ ಜತೆ ಸಂಬಂಧವೂ ಕಡಿದು ಹೋಗುವುದು. ಏಕೆಂದರೆ, ಆತನ ಆಲೋಚನೆ ಮತ್ತು ವರ್ತನೆಗಳೆಲ್ಲವೂ ಇತರರ ಸಾಮರ್ಥ್ಯಗಳನ್ನು ನಾಶಪಡಿಸುವುದಕ್ಕೆ ಸೀಮಿತವಾಗಿರುತ್ತದೆ. ಅವರಿಗೆ ಅಲ್ಲಾಹನು ಸಾಮರ್ಥ್ಯಗಳನ್ನು ನೀಡಿದ್ದಾನೆ. ಹಾಗೆಯೇ ನನಗೆ ಸಾಮರ್ಥ್ಯಗಳನ್ನು ನೀಡಲೂ ಅಲ್ಲಾಹನಿಗೆ ಸಾಧ್ಯವಿದೆ. ಆದ್ದರಿಂದ ನಾನು ಅಲ್ಲಾಹನೊಡನೆ ಬೇಡಿ ಪ್ರಾರ್ಥಿಸುತ್ತೇನೆಂದು ಆತ ಭಾವಿಸುವುದಿಲ್ಲ. ಹೀಗಿರುತ್ತಾ ಆತ ಸೃಷ್ಟಿಕರ್ತನಿಗೆ ನಿಕಟನಾಗುವುದು ಹೇಗೆ? ಸಂಕ್ಷಿಪ್ತದಲ್ಲಿ ಅಸೂಯೆಯು ಮನಸ್ಸಿನ ಬೆಂಕಿಯಾಗಿದೆ. ಅದು ಸ್ವಯಂ ಸುಟ್ಟು ಬಿಡುತ್ತದೆ. ಒಳಿತುಗಳನ್ನೂ ಕೊಂದು ಬಿಡುತ್ತದೆ. ಆ ಕುರಿತು ಪ್ರವಾದಿ(ಸ) ಹೇಳಿದ್ದಾರೆ:

إِيَّاكُمْ وَالْحَسَدَ فَإِنَّ الْحَسَدَ يَأْكُلُ الْحَسَنَاتِ كَمَا تَأْكُلُ النَّارُ الْحَطَبَ (أبو داود)

"ಅಸೂಯೆಯ ಬಗ್ಗೆ ಎಚ್ಚರಿಕೆ ವಹಿಸಿರಿ. ಏಕೆಂದರೆ, ಅಸೂಯೆಯು ಸತ್ಕರ್ಮಗಳನ್ನು ನಾಶಪಡಿಸುತ್ತದೆ- ಬೆಂಕಿಯು ಸೌದೆಯನ್ನು ತಿಂದು ಬಿಡುವಂತೆ." (ಅಬೂದಾವೂದ್)

ಸತ್ಯವಿಶ್ವಾಸ ಮತ್ತು ಅಸೂಯೆಯು ಒಬ್ಬನ ಮನದಲ್ಲಿ ಒಟ್ಟಿಗೆ ಸೇರಿರಲಾರವು. ಏಕೆಂದರೆ, ಓರ್ವ ಸಹೋದರನಿಗೆ ಏನಾದರೂ ಅನುಗ್ರಹ ದೊರೆತರೆ ಸತ್ಯವಿಶ್ವಾಸಿ ಏನು ಮಾಡುತ್ತಾನೆ. ಅದಕ್ಕಾಗಿ ಸಂತೋಷ ಪಡುತ್ತಾನೆ. ತನಗೆ ದೊರೆತಂತೆಯೇ ಭಾವಿಸಿ ಅಲ್ಲಾಹನನ್ನು ಸ್ತುತಿಸುತ್ತಾನೆ. ಪ್ರವಾದಿವರ್ಯರೂ(ಸ) ಹಾಗೆಯೇ ಮಾಡುತ್ತಿದ್ದರು. ಅವರು ಸಾಮಾನ್ಯವಾಗಿ ಹೀಗೆ ಹೇಳುತ್ತಿದ್ದರು:

"ಅಲ್ಲಾಹನೇ, ನನಗೆ ಅಥವಾ ನಿನ್ನ ಯಾವುದಾದರೂ ಸೃಷ್ಟಿಗಳಿಗೆ ಏನಾದರೂ ಅನುಗ್ರಹ ದೊರೆತರೆ ಅದು ಕೇವಲ ನಿನ್ನಿಂದಾಗಿಯೇ. ನಿನಗೆ ಯಾರೂ ಸಹಭಾಗಿಗಳಿಲ್ಲ. ನಿನಗೆ ಸ್ತುತಿ, ನಿನಗೆ ಕೃತಜ್ಞತೆ."

ಅನಸ್(ರ) ಹೇಳಿದ್ದಾರೆ: ನಾವು ಒಮ್ಮೆ ಪ್ರವಾದಿಯವರ(ಸ) ಬಳಿಯಿದ್ದಾಗ ಅವರು ಹೇಳಿದರು: "ಸ್ವರ್ಗವಾಸಿಗಳಲ್ಲಿ ಸೇರಿರುವ ಒಬ್ಬರು ಈಗ ಇಲ್ಲಿಗೆ ಬರಲಿದ್ದಾರೆ." ಆಗ ಎಡಗೈಯಲ್ಲಿ ಚಪ್ಪಲಿ ಹಿಡಿದುಕೊಂಡು ಓರ್ವ ಅನ್ಸಾರಿ ಅಲ್ಲಿಗೆ ಬರುತ್ತಾರೆ. ವುಝೂವಿನ ನೀರು ಅವರ ಗಡ್ಡದಿಂದ ತೊಟ್ಟಿಕ್ಕುತ್ತಿತ್ತು. ಮುಂದಿನ

ಎರಡು ದಿನಗಳಲ್ಲಿಯೂ ಪ್ರವಾದಿಯವರು(ಸ) ಅದೇ ಪ್ರಕಾರ ಹೇಳಿದರು. ಆ ಸಂದರ್ಭದಲ್ಲಿಯೂ ಅದೇ ಸಹಾಬಿ ಅಲ್ಲಿಗೆ ಆಗಮಿಸಿದ್ದರು. ಅದೇ ರೂಪದಲ್ಲಿ! ಇದನ್ನು ನೋಡಿ ಅಬ್ದುಲ್ಲಾ ಬಿನ್ ಉಮರ್‌ರಿಗೆ(ರ) ಒಂದು ಆಲೋಚನೆ ಹೊಳೆಯಿತು. ಅವರ ಗುಣನಡತೆಗಳನ್ನು ತಿಳಿಯಬೇಕು. ಆ ಬಳಿಕ ಅವರಂತೆಯೇ ನಾನೂ ಬಾಳಬಹುದಲ್ಲವೇ.

ಅಂತೆಯೇ ಒಂದು ಉಪಾಯ ಹೂಡಿ ಅವರು ಆ ಸಹಾಬಿಯ ಮನೆಯಲ್ಲಿಯೇ ನಾಲ್ಕು ದಿನ ತಂಗಿದರು. ಇಬ್ನು ಉಮರ್(ರ) ಹೇಳುತ್ತಾರೆ: ಈ ದಿನಗಳಲ್ಲಿ ಅವರು ರಾತ್ರಿ ಎದ್ದು ನಮಾಝ್ ಮಾಡುವುದನ್ನು ನಾನು ನೋಡಿಲ್ಲ. ಆಗಾಗ ಹಾಸಿಗೆಯಲ್ಲಿ ಹೊರಳಿ ಮಲಗುವಾಗ 'ಅಲ್ಲಾಹ್, ಅಲ್ಲಾಹ್' ಎಂದು ಹೇಳುತ್ತಿದ್ದರು. ಆದರೆ ಸವಿನುಡಿಯ ಹೊರತು ಬೇರೆ ಯಾವ ಮಾತನ್ನೂ ನಾನು ಅವರ ಬಾಯಿಯಿಂದ ಕೇಳಿಲ್ಲ.

ಮೂರು ದಿನಗಳ ಬಳಿಕ ಅವರ ನಡವಳಿಕೆಯು ತೀರಾ ಸರಳವೆಂದು ನನಗೆ ತೋಚಿತು. ಆದ್ದರಿಂದ ನಾನು ನಡೆದ ವೃತ್ತಾಂತವನ್ನು ಅವರಿಗೆ ತಿಳಿಸಿದೆ. ಅನಂತರ ಕೇಳಿದೆ: "ನೀವು ಅಂತಹ ಮಹತ್ಕಾರ್ಯ ಮಾಡುವುದನ್ನು ನಾನು ನೋಡಿಲ್ಲ. ಹೀಗಿರುತ್ತಾ ಪ್ರವಾದಿಯವರು(ಸ) ನಿಮ್ಮ ಬಗ್ಗೆ ಹಾಗೆ ಹೇಳಿದ್ದೇಕೆ?"

"ಅದಕ್ಕೆ ನೀವು ನೋಡಿಲ್ಲದ ಯಾವುದೇ ಕಾರಣವಿಲ್ಲ" ಅವರು ಹೇಳಿದರು.

ಹೀಗೆ ಇಬ್ನು ಉಮರ್(ರ) ಅಲ್ಲಿಂದ ಹೊರಟಾಗ ಅವರು ಪುನಃ ಕರೆದರು: "ಅದಕ್ಕೆ ನೀವು ನೋಡಿಲ್ಲದ ಯಾವುದೇ ಕಾರಣವಿಲ್ಲ. ಆದರೆ, ಓರ್ವ ಮುಸ್ಲಿಮನನ್ನು ವಂಚಿಸಬೇಕೆಂದು ನನ್ನ ಮನಸ್ಸಿಗೆ ಈ ತನಕ ತೋಚಿಲ್ಲ. ಅಲ್ಲಾಹನು ನೀಡಿದ ಯಾವುದಾದರೂ ಅನುಗ್ರಹಕ್ಕಾಗಿ ನಾನು ಯಾರ ಮೇಲೆಯೂ ಅಸೂಯೆಪಟ್ಟಿಲ್ಲ."

ಅದನ್ನು ಕೇಳಿದಾಗ ಇಬ್ನು ಉಮರ್(ರ) ಹೇಳಿದರು: "ಹಾಗಾದರೆ ಅದೇ ಕಾರಣ."

ಚಾಡಿಯು ಅಸೂಯೆಯಿಂದ ಬೆಳೆಯುವ ಇನ್ನೊಂದು ದುರ್ಗುಣ. ಇಬ್ಬರು ಪರಸ್ಪರ ಬಹಳ ಸ್ನೇಹದಿಂದಿರುವುದನ್ನು ನೋಡಿ ಇನ್ನೊಬ್ಬನಿಗೆ ಅಸೂಯೆಯಾಗುತ್ತದೆ. ಪತಿ-ಪತ್ನಿಯರು ಪ್ರೀತಿಯಿಂದ ಬಾಳುವುದನ್ನು ನೋಡಿ ಕೆಲವೊಮ್ಮೆ ನೆರೆಮನೆಯಾತನಿಗೆ ಅಸೂಯೆಯಾಗುತ್ತದೆ. ಸಾಮರಸ್ಯದಿಂದ ಬಾಳುವ ಕುಟುಂಬಗಳ ಬಗ್ಗೆಯೂ ಕೆಲವರು ಅಸೂಯೆಪಡುತ್ತಾರೆ. ಹೀಗೆ ಒಗ್ಗಟ್ಟಿನಿಂದ ಬಾಳುವವರನ್ನು ನೋಡಿ ಅಸೂಯೆ ಪಡುವವರು ಅವರ ನಡುವೆ ಒಡಕು ಹುಟ್ಟಿಸಲು ಪ್ರಯತ್ನಿಸುತ್ತಾರೆ. ಅದಕ್ಕಾಗಿ ಅಸೂಯೆಗಾರ ಒಬ್ಬನೊಡನೆ ಒಂದು ರೀತಿಯಲ್ಲಿ ಹೇಳಿದರೆ ಇನ್ನೊಬ್ಬನೊಡನೆ

ಇನ್ನೊಂದು ರೀತಿಯಲ್ಲಿ ಹೇಳುತ್ತಾನೆ. ಇಬ್ಬರ ಹಿತೈಷಿಯಂತೆ ನಟಿಸುತ್ತಾನೆ. ಆದರೆ ಇಬ್ಬರಲ್ಲಿಯೂ ವಿರಸ ಮೂಡಿಸುವ ಮಾತುಗಳನ್ನೇ ಹೇಳುತ್ತಾನೆ. ಹಾಗಾದರೆ ಈತನಿಗೆ ಎಷ್ಟು ಮುಖಗಳಿವೆ? ಎರಡು ಮುಖ! ಹೀಗೆ ಹಲವು ಮುಖಗಳಿರುವಾತನೇ ಚಾಡಿಕೋರ. ಪ್ರವಾದಿಯವರು(ಸ) ಅಂತಹ ಮಂದಿಯನ್ನು ಶಪಿಸಿದ್ದಾರೆ.

ಕೆಲವೊಮ್ಮೆ ಅವರು ಹೇಳುವ ವಿಷಯವು ಸತ್ಯವಾಗಿರಬಹುದು. ಆದರೆ, ಎಲ್ಲ ಸತ್ಯವನ್ನೂ ಯಾವಾಗಲೂ ಹೇಳುತ್ತಾ ನಡೆದಾಡಬೇಕಾಗಿಲ್ಲ. ಸಹೋದರರ ಮಧ್ಯೆ ದ್ವೇಷ ಹುಟ್ಟಿಸುವಂತಹ ಸತ್ಯದ ಬಗ್ಗೆ ಬಹಳಷ್ಟು ಎಚ್ಚರಿಕೆ ವಹಿಸಬೇಕು. ಅದನ್ನು ಯಾಕೆ ಹೇಳಬೇಕು? ಅದರಿಂದ ಸ್ನೇಹಿತರಲ್ಲಿ ಒಡಕು ಹುಟ್ಟಿಸುವ ಹೊರತು ಬೇರೆ ಯಾವ ಪ್ರಯೋಜನವೂ ಇಲ್ಲ. ಇಂತಹ ಸಂದರ್ಭಗಳಲ್ಲಿ ತಿಳಿದಿರುವ ಸತ್ಯಗಳನ್ನು ಗೌಪ್ಯವಾಗಿಡುವುದೇ ಉತ್ತಮ. ಆದರೆ, ಅಸೂಯೆಗಾರ ಮತ್ತು ಚಾಡಿಕೋರರು ಸೌಹಾರ್ದದ ಭಾವನೆಯನ್ನು ಹೊಂದಿರುವುದಿಲ್ಲ. ಆದ್ದರಿಂದ ಅವರು ಇರುವ ಹಾಗೂ ಇಲ್ಲದ ವಿಷಯಗಳನ್ನು ಸೇರಿಸಿ ಹೇಳಿ ಶತ್ರುತ್ವವನ್ನು ಬೆಳೆಸುತ್ತಾರೆ. ಎಂಥ ದುಷ್ಟ ಭಾವನೆ! ಪ್ರವಾದಿ(ಸ) ಹೀಗೆ ಹೇಳಿದ್ದಾರೆ:

"ಚಾಡಿ ಹೇಳುತ್ತಾ ನಡೆದು, ಸಾಮರಸ್ಯದಿಂದ ಬಾಳುವವರ ನಡುವೆ ವಿರಸ ಮೂಡಿಸಿ ನಿರಪರಾಧಿಗಳಿಗೆ ತೊಂದರೆ ಕೊಡಬಯಸುವವರೇ ಅಲ್ಲಾಹನ ದಾಸರಲ್ಲಿ ಅತ್ಯಂತ ದುಷ್ಟರು!"

(ಅಹ್ಮದ್)

ಇಷ್ಟೊಂದು ನೀಚಗುಣ ಸತ್ಯವಿಶ್ವಾಸಿಗಳಿಗೆ ಭೂಷಣವಲ್ಲವೆಂದು ಹೇಳಬೇಕಾಗಿಲ್ಲವಷ್ಟೆ. ಆದ್ದರಿಂದಲೇ ಪ್ರವಾದಿ(ಸ) ಹೇಳಿದ್ದಾರೆ:

لاَ يَدْخُلُ الْجَنَّةَ نَمَّامٌ (بخاری، مسلم)

"ಚಾಡಿಕೋರನು ಸ್ವರ್ಗ ಪ್ರವೇಶಿಸಲಾರ."

(ಬುಖಾರಿ, ಮುಸ್ಲಿಮ್)

ಪ್ರಶ್ನೆಗಳು:

1. ಅಸೂಯೆಯ ಲಕ್ಷಣಗಳು ಯಾವುವು?

2. ಸಹೋದರನಿಗೆ ಅನುಗ್ರಹ ದೊರೆತಾಗ ಸತ್ಯವಿಶ್ವಾಸಿ ಏನು ಮಾಡಬೇಕು? ಸರಿಯಾದ ಉತ್ತರವನ್ನು ಸೂಚಿಸಿರಿ.

3. ಅಸೂಯೆಯಿಂದ ಬೆಳೆಯುವ ದುರ್ಗುಣಗಳು?
(ಅಹಂಕಾರ, ಚಾಡಿ, ವಚನಭಂಗ)

4. ಅಸೂಯೆಯನ್ನು ಪ್ರವಾದಿಯವರು(ಸ) ಯಾವುದಕ್ಕೆ ಹೋಲಿಸಿದ್ದಾರೆ.?
(ಮಣ್ಣು, ನೀರು, ಬೆಂಕಿ)

9

ಅಪಹಾಸ್ಯ ಮತ್ತು ಪರನಿಂದೆ

ಮಾನವರಲ್ಲಿ ಯಾವುದಾದರೊಂದು ಕುಂದುಕೊರತೆಯಿಲ್ಲದವರ್ಯಾರೂ ಇರಲಾರರು. ಕುಂದುಕೊರತೆಯಿಲ್ಲದವನು ಅಲ್ಲಾಹನು ಮಾತ್ರ. ಆದರೆ ಈ ವಿಷಯವನ್ನು ಹೆಚ್ಚಿನವರು ಮರೆತು ಬಿಡುತ್ತಾರೆ. ಇತರರ ಕುಂದುಕೊರತೆಗಳನ್ನು ನೋಡಿ ಅಪಹಾಸ್ಯ ಮಾಡುತ್ತಾರೆ. ಇದು ಮಹಾಪಾಪ. ಏಕೆಂದರೆ, ಅದು ಪ್ರತೀಕಾರ ಮತ್ತು ಜಗಳಕ್ಕೆ ಹೇತುವಾಗುತ್ತದೆ. ಅಪಹಾಸ್ಯಕ್ಕೀಡಾದವನ ಗೌರವಕ್ಕೆ ಕುಂದುಂಟಾಗುತ್ತದೆ. ಆತ್ಮಗೌರವದ ಸಂರಕ್ಷಣೆಗಾಗಿ ಮಾನವನು ಯಾವ ತ್ಯಾಗಕ್ಕೂ ಹೇಸುವುದಿಲ್ಲ. ಇನ್ನು ಒಂದು ವೇಳೆ ಅದು ಸಾಧ್ಯವಾಗದಿದ್ದರೆ ಮಾನಸಿಕವಾಗಿಯಾದರೂ ಆತನನ್ನು ದ್ವೇಷಿಸುತ್ತಾನೆ. ಹೀಗೆ ದ್ವೇಷ ಮತ್ತು ಪ್ರತೀಕಾರ ಮನೋಭಾವವಿರುವವರು ಪರಸ್ಪರ ಸ್ನೇಹದಿಂದ ಬಾಳಲು ಸಾಧ್ಯವಿದೆಯೇ? ಅವರಿಗೆ ನೆಮ್ಮದಿಯಿಂದ ನಿದ್ರಿಸಲು ಸಾಧ್ಯವಿದೆಯೇ?

ಅದಲ್ಲದೇ, ಪರಸ್ಪರ ಅಪಹಾಸ್ಯ ಮಾಡುವ ಅರ್ಹತೆ ಯಾರಿಗಿದೆ? ಕೈ ಇಲ್ಲದವನಿಗೆ ಬೆರಳಿಲ್ಲದವನನ್ನು ಅಪಹಾಸ್ಯ ಮಾಡುವ ಹಕ್ಕಿದೆಯೇ? ವಸ್ತುತಃ ನಮಗೆ ಯಾರನ್ನೂ ಅಪಹಾಸ್ಯ ಮಾಡುವ ಹಕ್ಕಿಲ್ಲ. ಈ ಜಗತ್ತಿನಲ್ಲಿ ಯಾವುದೂ ಶಾಶ್ವತವಲ್ಲ. ಹಣ, ಅಧಿಕಾರ, ಆರೋಗ್ಯ, ಸೌಂದರ್ಯ ಇತ್ಯಾದಿಗಳು ಅಲ್ಪಾಯುಷಿಗಳಾಗಿವೆ. ಇಂದಿನ ಶ್ರೀಮಂತ ನಾಳೆಯ ಭಿಕಾರಿಯಾಗಬಹುದು. ಇಂದು ಆರೋಗ್ಯ ಮತ್ತು ಸೌಂದರ್ಯವಿರುವಾತನು ನಾಳೆ ರೋಗಿ ಮತ್ತು ಕುರೂಪಿಯಾಗಬಹುದು. ಸ್ಥಾನಮಾನಗಳ ಸ್ಥಿತಿಯೂ ಅಷ್ಟೇ. ಹೀಗಿರುತ್ತಾ ಈ ವಿಷಯಗಳಿಗಾಗಿ ಪರಸ್ಪರ ಅಪಹಾಸ್ಯ ಮಾಡಲು ಹೇಗೆ ತಾನೇ ಸಾಧ್ಯ?

ಇದು ಈ ಲೋಕದ ಸ್ಥಿತಿ! ನಾಳೆ ಪರಲೋಕದಲ್ಲಿ ಹೇಗಿರುತ್ತದೆ? ಇಲ್ಲಿನ ಸ್ಥಾನಮಾನ ಪ್ರತಾಪಗಳು ಅಲ್ಲಿ ಕಾಣಿಸುವುದಿಲ್ಲ. ಇಲ್ಲಿ ಯಾರೂ ತಿರುಗಿ ನೋಡದ ಓರ್ವ ಬಡವ ಅಲ್ಲಿ ಅತ್ಯುನ್ನತನಾಗಿರಬಹುದು. ಏಕೆಂದರೆ, ಅಲ್ಲಾಹನು ನಮ್ಮ ಹಣ, ಸೌಂದರ್ಯ, ಸ್ಥಾನಮಾನಗಳನ್ನು ನೋಡುವುದಿಲ್ಲ. ಬದಲಾಗಿ ಮನಸ್ಸು ಮತ್ತು ಕರ್ಮವನ್ನು ನೋಡುತ್ತಾನೆ. ಸಹೃದಯದಿಂದ ಸತ್ಕರ್ಮಗಳನ್ನು ಮಾಡಿದಾತನೇ ಅಲ್ಲಿ ಉನ್ನತನು. ಪ್ರವಾದಿ(ಸ) ಹೇಳಿದ್ದಾರೆ:

إِنَّ اللّٰهَ لاَ يَنْظُرُ إِلَى صُوَرِكُمْ وَأَمْوَالِكُمْ وَلٰكِنْ يَنْظُرُ إِلَى قُلُوبِكُمْ وَأَعْمَالِكُمْ (مسلم)

"ಅಲ್ಲಾಹನು ನಿಮ್ಮ ರೂಪ ಅಥವಾ ಸಂಪತ್ತನ್ನು ನೋಡುವುದಿಲ್ಲ. ಆತನು ನಿಮ್ಮ ಹೃದಯ ಮತ್ತು ಕರ್ಮಗಳನ್ನು ನೋಡುತ್ತಾನೆ."

(ಮುಸ್ಲಿಮ್)

ಈಗ ಆಲೋಚಿಸಿ ನೋಡಿರಿ. ಶಾಶ್ವತವಾದ ಪರಲೋಕದಲ್ಲಿ ಯಾರು ಉನ್ನತನೆಂದು ನಮಗೆ ತಿಳಿದಿಲ್ಲ. ಹೀಗಿರುತ್ತಾ ನಾವು ಇತರರನ್ನು ಅಪಹಾಸ್ಯ ಮಾಡುವುದು ಅಥವಾ ನಿಂದಿಸುವುದಾದರೂ ಹೇಗೆ? ಆ ಕುರಿತು ಅಲ್ಲಾಹನು ಹೀಗೆ ಹೇಳಿರುತ್ತಾನೆ:

يَٰٓأَيُّهَا ٱلَّذِينَ ءَامَنُوا۟ لَا يَسْخَرْ قَوْمٌ مِّن قَوْمٍ عَسَىٰٓ أَن يَكُونُوا۟ خَيْرًا مِّنْهُمْ وَلَا نِسَآءٌ مِّن نِّسَآءٍ عَسَىٰٓ أَن يَكُنَّ خَيْرًا مِّنْهُنَّ

"ಸತ್ಯವಿಶ್ವಾಸಿಗಳೇ, ಪುರುಷರು ಇತರ ಪುರುಷರನ್ನು ಪರಿಹಾಸ್ಯ ಮಾಡಬಾರದು. ಅವರು ಇವರಿಗಿಂತ ಉತ್ತಮರಿರಲೂಬಹುದು ಮತ್ತು ಸ್ತ್ರೀಯರು ಇತರ ಸ್ತ್ರೀಯರನ್ನೂ ಪರಿಹಾಸ್ಯ ಮಾಡಬಾರದು. ಅವರು ಇವರಿಗಿಂತ ಉತ್ತಮರಿರಲೂಬಹುದು."

(ಅಲ್ ಹುಜುರಾತ್ :11)

ಪರನಿಂದೆಯು ಅಪಹಾಸ್ಯಕ್ಕಿಂತ ಭೀಕರವಾದ ದುರ್ಗುಣವಾಗಿದೆ. ಸಹೋದರನ ಕುಂದುಕೊರತೆಗಳನ್ನು ಕೆದಕಿ ನೋಡುವುದು, ಅನಂತರ ಆತ ಇಲ್ಲದಿರುವಾಗ ಆ ಕುಂದುಕೊರತೆಗಳನ್ನು ಎತ್ತಿ ಹೇಳಿ ಸಂತೋಷ ಪಡುವುದು. ಇತರರ ಮುಂದೆ ಆತನನ್ನು ಅವಮಾನಿಸುವುದು. ಇದುವೇ ಪರನಿಂದೆ. ಅತ್ಯಂತ ಹೀನವಾದ ವರ್ತನೆ.

ಒಂದು ವೇಳೆ ಪ್ರಸ್ತುತ ಕುಂದುಕೊರತೆಗಳು ಸಹೋದರನಲ್ಲಿ ಇರಬಹುದು. ಹಾಗಿದ್ದರೂ ಅದು ಪರನಿಂದೆಯಾಗುತ್ತದೆ. ಒಂದು ವೇಳೆ ಅದು ಆತನಲ್ಲಿ ಇಲ್ಲದಿದ್ದರೆ? ಪರನಿಂದೆಯೊಂದಿಗೆ ಸುಳ್ಳನ್ನು ಹೇಳಿದಂತಾಯಿತು. ಆಗ ಅಪರಾಧದ ಪ್ರಮಾಣ ದ್ವಿಗುಣವಾಗುತ್ತದೆ.

ಹೀಗೆ ಸಹೋದರನ ತಪ್ಪುಗಳನ್ನು ಆತನಿಗೆ ತಿಳಿಯದಂತೆ ಹೇಳಿ ನಡೆಯುವುದೇಕೆ? ಆತನೊಂದಿಗೆ ಪ್ರೀತಿಯಿಂದಲೋ? ಅಥವಾ ಆತನು ಉತ್ತಮವಾಗಬೇಕೆಂಬ ಬಯಕೆಯಿಂದಲೋ? ಖಂಡಿತ ಅಲ್ಲ. ಹಾಗಿದ್ದರೆ ವಿಷಯವನ್ನು ನೇರವಾಗಿ ಆತನಿಗೆ ತಿಳಿಸಬಹುದಾಗಿತ್ತು. ಅದರ ಬದಲಾಗಿ ಇತರರ ಮುಂದೆ ಆತನನ್ನು

ಅವಮಾನಿಸಲಾಗುತ್ತದೆ. ಆತನ ಗೌರವವನ್ನು ಚಿಂದಿ ಮಾಡಲಾಗುತ್ತದೆ. ಯಾರನ್ನಾದರೂ ಅವಮಾನಿಸಿ ಅವರ ಗುಣನಡತೆಯನ್ನು ಉತ್ತಮ ಪಡಿಸಬಹುದೆಂದು ನೀವು ಭಾವಿಸುತ್ತೀರಾ?

ಆದರೆ ಪರನಿಂದೆ ಮಾಡುವಾಗ ಪರಿಣಾಮವು ಕೇವಲ ಅಪಮಾನಕ್ಕೆ ಸೀಮಿತವಾಗುವುದಿಲ್ಲ. ಯಾರ ಮೇಲಾದರೂ ದೋಷವನ್ನು ಆರೋಪಿಸುವಾಗ ಅವರು ಅಲ್ಲಿ ಉಪಸ್ಥಿತರಿದ್ದರೆ ಅದಕ್ಕೆ ಉತ್ತರಿಸಲು ಸಾಧ್ಯವಿದೆ. ಅವರು ವಸ್ತುಸ್ಥಿತಿಯನ್ನು ವಿವರಿಸಬಹುದು. ಆದರೆ ಪರನಿಂದಕನಿಗೆ ಆ ಧೈರ್ಯವಿರುವುದಿಲ್ಲ. ಆತ ಹೇಡಿಯಂತೆ ಬೆನ್ನ ಹಿಂದೆ ಚುಚ್ಚುತ್ತಾನೆ. ಅದನ್ನು ತಡೆಯಲು ಯಾರಿಗಾದರೂ ಸಾಧ್ಯವಿದೆಯೇ?

ಪರನಿಂದೆಯು ಇಂತಹ ಮಹಾ ದೋಷ, ಹೇಡಿತನ ಮತ್ತು ಹೀನಕೃತ್ಯವಾಗಿರುವುದರಿಂದ ಕುರ್‌ಆನ್ ಅದನ್ನು ಬಲವಾಗಿ ಖಂಡಿಸಿದೆ. ಕುರ್‌ಆನ್ ಹೇಳುತ್ತದೆ:

وَلَا يَغْتَبْ بَّعْضُكُمْ بَعْضًا ۚ أَيُحِبُّ أَحَدُكُمْ أَنْ يَأْكُلَ لَحْمَ أَخِيهِ مَيْتًا فَكَرِهْتُمُوهُ ۚ

"ನಿಮ್ಮಲ್ಲಿ ಯಾರೂ ಯಾರ ಬಗ್ಗೆಯೂ ಪರದೂಷಣೆ ಮಾಡಬಾರದು. ನಿಮ್ಮಲ್ಲಿ ಯಾರಾದರೂ ತನ್ನ ಮೃತ ಸಹೋದರನ ಮಾಂಸ ತಿನ್ನುವುದನ್ನು ಇಷ್ಟಪಡುವನೇ? ನೀವು ಸ್ವತಃ ಇದನ್ನು ಅಸಹ್ಯಪಡುತ್ತೀರಿ."

(ಅಲ್ ಹುಜುರಾತ್ : 12)

ಇತರರ ಲೋಪದೋಷಗಳನ್ನು ಪತ್ತೆ ಹಚ್ಚುವ ಹೊಣೆಯನ್ನು ಯಾರೂ ನಮಗೆ ವಹಿಸಿಲ್ಲ. ಅದು ಸತ್ಯವಿಶ್ವಾಸಿಯ ಗುಣವೂ ಅಲ್ಲ. ಒಂದು ವೇಳೆ ಅನ್ಯರ ಕುಂದುಕೊರತೆ ತಿಳಿದು ಬಂದರೂ ಅದನ್ನು ಗುಪ್ತವಾಗಿಡಬೇಕು. ಹಾಗಾದರೆ ಅಲ್ಲಾಹನು ನಮ್ಮ ಕುಂದುಕೊರತೆಗಳನ್ನು ಅಡಗಿಸುತ್ತಾನೆ. ನಮ್ಮಲ್ಲಿಯೂ ಅನೇಕ ಕುಂದುಕೊರತೆಗಳಿರುತ್ತವೆ. ಆ ಕುರಿತು ಅಲ್ಲಾಹನು ನಮ್ಮೊಡನೆ ವಿಚಾರಿಸುವನು. ಆದ್ದರಿಂದ ಸ್ವಂತ ಕುಂದುಕೊರತೆಗಳನ್ನು ಗುರುತಿಸಿ ನಾವು ತಿದ್ದಿಕೊಳ್ಳಲು ಪ್ರಯತ್ನಿಸಬೇಕು. ಪ್ರವಾದಿ(ಸ) ಹೇಳಿದ್ದಾರೆ:

طُوبَى لِمَنْ شَغَلَهُ عَيْبُهُ عَنْ عُيُوبِ النَّاسِ

"ಜನರ ತಪ್ಪುಗಳನ್ನು ನಿರ್ಲಕ್ಷಿಸಿ, ಸ್ವಂತ ತಪ್ಪುಗಳನ್ನು ಗಮನಿಸುವವರಿಗೆ ಶುಭವಿದೆ.!"

ಪ್ರಶ್ನೆಗಳು:

1. ಪುರುಷನು ಸ್ತ್ರೀಯನ್ನೂ ಸ್ತ್ರೀಯು ಪುರುಷನನ್ನೂ ಅಪಹಾಸ್ಯ ಮಾಡಬಹುದೇ?
2. ಪರನಿಂದೆ ಮತ್ತು ಸುಳ್ಳುಗಳ ನಡುವೆ ಯಾವ ವ್ಯತ್ಯಾಸವಿದೆ?
3. ಗೌರವಕ್ಕೆ ಕುಂದುಂಟು ಮಾಡುವ ದುರ್ಗುಣ ಯಾವುದು?
4. ಅಪಹಾಸ್ಯವು ಸತ್ಯವಿಶ್ವಾಸಿಗಳಿಗೆ ಯೋಗ್ಯವಾದ ಗುಣವಲ್ಲವೆಂಬುದನ್ನು ಸೂಚಿಸುವ ಕುರ್‌ಆನ್ ಸೂಕ್ತವನ್ನು ತಿಳಿಸಿರಿ.
5. ಪರನಿಂದೆಯನ್ನು ಕುರ್‌ಆನಿನಲ್ಲಿ ಯಾವುದಕ್ಕೆ ಹೋಲಿಸಲಾಗಿದೆ?
6. ವಾಕ್ಯ ತುಂಬಿಸಿರಿ.

ಅ. ಇತರರ ಕುಂದುಕೊರತೆಗಳನ್ನು ಗುಪ್ತವಾಗಿರಿಸಿದರೆ ಅಲ್ಲಾಹನು ....

ಆ. ಅಲ್ಲಾಹನು ನಿಮ್ಮ.. ನೋಡುತ್ತಾನೆ.

(ರೂಪ ಮತ್ತು ಸಂಪತ್ತನ್ನು, ಹೃದಯ ಮತ್ತು ಕರ್ಮವನ್ನು, ಸಂಪತ್ತು ಮತ್ತು ಕರ್ಮವನ್ನು)

(10)

ಧೈರ್ಯ ಮತ್ತು ಸ್ಥೈರ್ಯ

ಧೈರ್ಯ ಮತ್ತು ಸ್ಥೈರ್ಯವು ಸತ್ಯವಿಶ್ವಾಸಿಯ ಎರಡು ಪ್ರಮುಖ ಗುಣಗಳಾಗಿವೆ. ಸತ್ಯವಿಶ್ವಾಸಿಯು ಅಲ್ಲಾಹನನ್ನು ಮಾತ್ರ ಸಂರಕ್ಷಕನಾಗಿ ಅಂಗೀಕರಿಸುತ್ತಾನೆ. ಏಕೆಂದರೆ, ರಕ್ಷಣೆ ಮತ್ತು ದಂಡನೆ ಕೇವಲ ಅಲ್ಲಾಹನಿಂದ ಮಾತ್ರ ಸಾಧ್ಯ. ಉಪಕಾರ ಮತ್ತು ತೊಂದರೆ ಮಾಡಬಲ್ಲವನೂ ಅವನೇ. ಆತನ ತಿಳುವಳಿಕೆ ಮತ್ತು ಅನುಮತಿಯಿಲ್ಲದೆ ಒಂದು ಎಲೆಯೂ ಉದುರುವುದಿಲ್ಲ. ಆದ್ದರಿಂದ ಸತ್ಯವಿಶ್ವಾಸಿಯು ಹೀಗೆ ದೃಢವಾಗಿ ನಂಬುತ್ತಾನೆ.

لَّن يُصِيبَنَا إِلَّا مَا كَتَبَ ٱللَّهُ لَنَا

"ಅಲ್ಲಾಹನ ವಿಧಿಯ ಹೊರತು ಯಾವುದೂ ನಮ್ಮನ್ನು ಪೀಡಿಸುವುದಿಲ್ಲ."
(ಅತ್ತೌಬಃ : 51)

ಈ ವಿಶ್ವಾಸವು ಮನದಲ್ಲಿ ದೃಢವಾಗಿದ್ದರೆ, ಭೂಮಿಯ ಯಾವ ಶಕ್ತಿಗೂ ಆತ ಹೆದರುವುದಿಲ್ಲ. ಹೆದರಬೇಕಾಗಿಲ್ಲ. ಆದ್ದರಿಂದ ಸತ್ಯವಿಶ್ವಾಸಿಯು ಯಾವಾಗಲೂ ಧೈರ್ಯಶಾಲಿಯಾಗಿರುತ್ತಾನೆ. ಪ್ರವಾದಿಯವರೇ(ಸ) ಧೈರ್ಯದ ಉತ್ತಮ ಮಾದರಿಯಾಗಿದ್ದಾರೆ. ಉದಾಹರಣೆಗಾಗಿ ಒಂದು ಸಣ್ಣ ಘಟನೆಯನ್ನು ನೋಡಿರಿ.

ಒಮ್ಮೆ ಮದೀನಾದಲ್ಲಿ ನಡುರಾತ್ರೆ ಒಂದು ಭಯಂಕರ ಶಬ್ದ ಕೇಳಿಸಿತು. ಜನರು ನಿದ್ದೆಯಿಂದ ಎಚ್ಚೆತ್ತು ಕೈಗೆ ಸಿಕ್ಕಿದ ಆಯುಧ ಹಿಡಿದು ಅಲ್ಲಿಗೆ ಹೊರಟರು. ಸ್ವಲ್ಪ ಮುಂದೆ ಹೋದಾಗ ಓರ್ವ ಕುದುರೆ ಸವಾರ ಶಬ್ದ ಕೇಳಿಸಿದ ದಿಕ್ಕಿನಿಂದ ಮರಳಿ ಬರುತ್ತಿರುವುದು ಕಾಣಿಸಿತು. ಅವರ ಖಡ್ಗವು ಕೊರಳಲ್ಲಿ ನೇತಾಡುತ್ತಿತ್ತು. ಹತ್ತಿರ ಬಂದಾಗ ಅದು ಪ್ರವಾದಿಯವರೆಂದು(ಸ) ತಿಳಿಯಿತು. ಅವರು ಇತರರಿಗಿಂತ ಮುಂಚೆ ಖಡ್ಗ ಹಿಡಿದು ಘಟನೆಯ ಸ್ಥಳಕ್ಕೆ ಹೋಗಿದ್ದರು. ಅದೃಷ್ಟವಶಾತ್, ಅಲ್ಲಿ ವೈರಿಗಳಿಂದ ಆಕ್ರಮಣ ನಡೆದಿರಲಿಲ್ಲ. ಆದ್ದರಿಂದ ಪ್ರವಾದಿವರ್ಯರು(ಸ) ಜನರನ್ನು ಸಂತೈಸಿ ಹಿಂದೆ ಕಳಿಸಿದರು.

ಹುನೈನ್ ಯುದ್ಧದಲ್ಲಿ ಪ್ರವಾದಿಯವರ(ಸ) ಧೈರ್ಯದ ಇನ್ನೊಂದು ಉದಾಹರಣೆ ಎದ್ದು ತೋರುತ್ತದೆ. ಅದು ಮಕ್ಕಾ ವಿಜಯದ ಬಳಿಕ ಮುಸ್ಲಿಮರನ್ನು ಪುನಃ

ಅಲ್ಲಿಂದ ಹೊಡೆದೋಡಿಸುವ ಪ್ರಯತ್ನವಾಗಿತ್ತು. ವೈರಿಗಳು ಸರ್ವಸಜ್ಜಿತರಾಗಿ ಬಂದಿದ್ದರು. ವೈರಿಸೇನೆಯ ಸಹಸ್ರಾರು ಯೋಧರು ಮುಸ್ಲಿಮರ ಸೇನೆಯನ್ನು ಚೆಲ್ಲಾಪಿಲ್ಲಿಗೊಳಿಸಿದರು. ಅವರು ಅತ್ತಿತ್ತ ಪಲಾಯನ ಮಾಡಲಾರಂಭಿಸಿದರು. ಆದರೆ ಪ್ರವಾದಿಯವರ(ಸ) ಅಪ್ರತಿಮ ಧೈರ್ಯವು ಅವರನ್ನು ಒಂದುಗೂಡಿಸಿತು. ಮುಂಚೂಣಿಯಲ್ಲಿ ವೈರಿಗಳ ಅತ್ಯಂತ ಸಮೀಪದಲ್ಲಿ ನಿಂತು ಅವರು ಹೀಗೆ ಸಾರಿ ಹೇಳುತ್ತಿದ್ದರು:

أَنَا النَّبِيُّ لَا كَذِبْ أَنَا ابْنُ عَبْدِ الْمُطَّلِبْ

"ನಾನು ಅಬ್ದುಲ್ ಮುತ್ತಲಿಬ್‌ರ ಪುತ್ರ. ಸುಳ್ಳಲ್ಲ, ನಾನು ಸತ್ಯಪ್ರವಾದಿ."

ಪ್ರವಾದಿವರ್ಯರ(ಸ) ಈ ಧೈರ್ಯವನ್ನು ನೋಡಿ ಚದುರಿದ್ದ ಯೋಧರು ಪುನಃ ಒಂದುಗೂಡಿದರು. ವೀರಾವೇಶದಿಂದ ಹೋರಾಡಿ ಯುದ್ಧವನ್ನು ಗೆದ್ದರು.

ಪ್ರವಾದಿಯವರ(ಸ) ಸಂಗಾತಿಗಳೂ ಧೈರ್ಯಶಾಲಿಗಳಾಗಿದ್ದರು. ಬದ್ರ್, ಉಹುದ್, ಕಂದಕ್, ಹುನೈನ್ ಮತ್ತಿತರ ಯುದ್ಧಗಳು ಅವರ ಶೌರ್ಯದ ಜ್ವಲಂತ ಸಾಕ್ಷಿಗಳಾಗಿವೆ. ವೈರಿಗಳು ಸರ್ವಸಜ್ಜಿತವಾದ ಮಹಾಸೇನೆಯನ್ನು ಹೊಂದಿದ್ದರು. ಮುಸ್ಲಿಮ್ ಸೇನೆಯ ಸಂಖ್ಯಾಬಲವು ಕೆಲವೊಮ್ಮೆ ವೈರಿಗಳ ಹತ್ತನೇ ಒಂದಂಶ ಮಾತ್ರವಿರುತ್ತಿತ್ತು. ಶಸ್ತ್ರಾಸ್ತ್ರಗಳ ವಿಷಯದಲ್ಲಿಯೂ ಅಷ್ಟೆ. ಹಾಗಿದ್ದರೂ ಅವರಿಗೆ ಯಾವ ಭೀತಿಯೂ ಇರಲಿಲ್ಲ. ಅಲ್ಲಾಹನ ಮೇಲೆ ಭರವಸೆಯಿಟ್ಟು ಅವರು ಸತ್ಯಕ್ಕಾಗಿ ಹೋರಾಡಿದರು. ವೀರ ಹೋರಾಟಗಳು!

ಸ್ಥೈರ್ಯವು ಧೈರ್ಯದೊಂದಿಗೆ ಸೇರಿರುವ ಸತ್ಯವಿಶ್ವಾಸಿಗಳ ಇನ್ನೊಂದು ಗುಣವಾಗಿದೆ. ಎಲ್ಲ ರೀತಿಯ ಸಂಕಷ್ಟಗಳನ್ನೂ ತೊಂದರೆಗಳನ್ನೂ ಸಹಿಸಿ ಸತ್ಯಮಾರ್ಗದಲ್ಲಿ ಅಚಲವಾಗಿರುವುದು. ಅಗತ್ಯವಾದರೆ ಪ್ರಾಣ ನೀಡಲೂ ಸಿದ್ಧರಾಗಿರುವುದು. ಇದುವೇ ಸ್ಥೈರ್ಯ.

ಅಲ್ಲಾಹನ ಪ್ರವಾದಿಯವರೇ(ಸ) ಸ್ಥೈರ್ಯದ ಪ್ರಥಮ ಮಾದರಿಯಾಗಿದ್ದಾರೆ. ಪ್ರವಾದಿ ನೂಹ್‌ರ(ಅ) ಕಥೆಯನ್ನು ಕುರ್‌ಆನ್ ನಮಗೆ ತಿಳಿಸಿದೆ. ಆ ಮಹಾನ್ ಪ್ರವಾದಿಯವರು ಜನರನ್ನು 950 ವರ್ಷಗಳ ಕಾಲ ಅಲ್ಲಾಹನ ಮಾರ್ಗದೆಡೆಗೆ ಆಹ್ವಾನಿಸಿದ್ದರು. ಆದರೆ ಜನರಿಂದ ಅಪಹಾಸ್ಯ, ನಿಂದನೆ, ಕಿರುಕುಳ ಮಾತ್ರ ಅವರಿಗೆ ದೊರೆಯಿತು. ಆದರೂ ಅವರು ಎಲ್ಲವನ್ನೂ ಸಹಿಸಿ ಸಂದೇಶ ಪ್ರಚಾರವನ್ನು ಮುಂದುವರಿಸಿದರು. ಕೊನೆಗೆ ಅಲ್ಲಾಹನು ಘೋರ ಜಲ ಪ್ರಳಯದಿಂದ ಆ ದೇವ ಧಿಕ್ಕಾರಿಗಳನ್ನು ನಾಶಪಡಿಸಿದನು. ಒಮ್ಮೆ ಯೋಚಿಸಿ ನೋಡಿರಿ. ಆ ಸಹನೆ ಮತ್ತು ಸ್ಥೈರ್ಯ ಎಷ್ಟೊಂದು ಪ್ರಬಲವಾಗಿತ್ತು.

ಇನ್ನು ಪ್ರವಾದಿ ಇಬ್ರಾಹೀಮ್‌ರ(ಅ) ಕಥೆಯನ್ನು ನೋಡೋಣ. ಜನರನ್ನು ಅಲ್ಲಾಹನ ಮಾರ್ಗಕ್ಕೆ ಆಹ್ವಾನಿಸಿದ್ದಕ್ಕಾಗಿ ಅವರನ್ನು ಅವರ ತಂದೆ ಮನೆಯಿಂದ ಹೊರ ಹಾಕುತ್ತಾರೆ. ಕಲ್ಲೆಸೆದು ಕೊಲ್ಲುವ ಬೆದರಿಕೆ ಹಾಕುತ್ತಾರೆ. ಆದರೆ ಅವರು ಜಗ್ಗುವುದಿಲ್ಲ. ಕೊನೆಗೆ, ಆ ನಾಡಿನ ದುಷ್ಟ ರಾಜನು ಅವರನ್ನು ಬೆಂಕಿಗೆ ಎಸೆಯುತ್ತಾನೆ. ಆದರೆ, ಅಲ್ಲಾಹನು ಅವರನ್ನು ರಕ್ಷಿಸುತ್ತಾನೆ. ಆದರೂ ಅವರು ಸತ್ಯ ಪ್ರಚಾರವನ್ನು ತೊರೆದರೇ? ಇಲ್ಲ, ಮರಣದ ತನಕ ಎಲ್ಲ ಕಷ್ಟ, ನಷ್ಟ, ಹಿಂಸೆಗಳನ್ನು ಸಹಿಸಿ ಸಂದೇಶ ಪ್ರಚಾರ ನಡೆಸುತ್ತಾರೆ. ಸತ್ಯದ ಹಾದಿಯಲ್ಲಿ ಬೆಟ್ಟದಂತೆ ದೃಢವಾಗಿ ನಿಲ್ಲುತ್ತಾರೆ. ಅದುವೇ ಸ್ಥೈರ್ಯ!

ಪ್ರವಾದಿಯವರ(ಸ) ಕಾಲದಲ್ಲಿ ಕೆಲವು ಸಹಾಬಿಗಳು ಅನುಭವಿಸಿದ ಘೋರ ಹಿಂಸೆಗಳ ಕಥೆಯನ್ನು ನೀವು ಕೇಳಿರಬಹುದು. ಬಿಲಾಲ್(ರ), ಯಾಸಿರ್(ರ), ಸುಮಯ್ಯ(ರ), ಖುಬೈಬ್(ರ) ಮುಂತಾದ ಸಹಾಬಿಗಳ ರೋಮಾಂಚಕ ಕಥೆಗಳು! ಬಿಲಾಲ್‌ರನ್ನು(ರ) ಸುಡು ಮರಳಿನಲ್ಲಿ ಮಲಗಿಸಿ ಎದೆಯ ಮೇಲೆ ಭಾರವಾದ ಕಲ್ಲನ್ನು ಹೇರಿದರು. ಸತ್ಯವಿಶ್ವಾಸವನ್ನು ತೊರೆದರೆ ಈ ದುರಂತದಿಂದ ಪಾರಾಗಬಹುದಾಗಿತ್ತು. ಆದರೆ, ಮರಣ ಎದುರು ಬಂದರೂ ಅವರು ಅದಕ್ಕೆ ಸಿದ್ಧರಾಗಲಿಲ್ಲ.

ಯಾಸಿರ್(ರ) ಮತ್ತು ಸುಮಯ್ಯಾರ(ರ) ದೇಹಗಳಿಗೆ ಕಾದ ಕಬ್ಬಿಣದ ಸರಳನ್ನು ತುರುಕಲಾಯಿತು! ಆದರೂ ಅವರು ಸತ್ಯದಲ್ಲಿಯೇ ಅಚಲರಾಗಿ ನಿಂತರು. ಪುತ್ರ ಅಮ್ಮಾರ್‌ನ ಮುಂದೆ ಅವರನ್ನು ಕ್ರೂರವಾಗಿ ಕೊಂದು ವೈರಿಗಳು ತೃಪ್ತರಾದರು! ತಲೆಯ ಮೇಲೆ ಕತ್ತಿ ಝುಳಪಿಸುತ್ತಾ ಖುಬೈಬ್‌ರೊಡನೆ(ರ) ಸತ್ಯದಿಂದ ಮರಳುವಂತೆ ಒತ್ತಾಯಿಸಿದರು. ಅವರು ಕಿಂಚಿತ್ತೂ ವಿಚಲಿತರಾಗಲಿಲ್ಲ. ಆದ್ದರಿಂದ ದುಷ್ಟರು ಈ ಸಜ್ಜನರನ್ನೂ ಕೊಂದು ಬಿಟ್ಟರು.

ಹೀಗೆ ಆರಂಭ ಕಾಲದ ಸಹಾಬಿಗಳು ಅದೆಷ್ಟೋ ಹಿಂಸೆ-ದೌರ್ಜನ್ಯ ಅನುಭವಿಸಿದ್ದಾರೆ. ಆದರೆ, ಯಾವುದರಿಂದಲೂ ಅವರನ್ನು ಹೆದರಿಸಲಾಗಲಿಲ್ಲ. ಅವರು ಕೇವಲ ಅಲ್ಲಾಹನನ್ನು ಭಯಪಡುತ್ತಿದ್ದರು. ಆದ್ದರಿಂದ ಎಲ್ಲ ದುರಂತಗಳನ್ನು ಸಹಿಸಿಯೂ ಮರಣದ ತನಕ ಸತ್ಯದಲ್ಲಿ ದೃಢವಾಗಿ ನಿಂತರು. ಆದ್ದರಿಂದಲೇ ಅವರು ವಿಜಯ ಹೊಂದಿದರು.

ಪ್ರಶ್ನೆಗಳು:

1. ಸತ್ಯವಿಶ್ವಾಸಿಯು ಧೈರ್ಯಶಾಲಿಯಾಗಿರುವುದೇಕೆ?
2. ಪ್ರವಾದಿಯವರ(ಸ) ಧೈರ್ಯಕ್ಕೆ ಒಂದು ಉದಾಹರಣೆ ಕೊಡಿ.
3. ಹುನೈನ್ ಯುದ್ಧದಲ್ಲಿ ಪ್ರವಾದಿಯವರು(ಸ) ವೈರಿಗಳ ಸಮೀಪ ನಿಂತು ಏನೆಂದು ಸಾರಿ ಹೇಳಿದರು?
3. ಪ್ರವಾದಿ ನೂಹ್‌ರ(ಅ) ಸ್ಥೈರ್ಯದ ಉದಾಹರಣೆ ಕೊಡಿ.
4. ಬಿಲಾಲ್ ಮತ್ತು ಖುಬೈಬ್ ಅನುಭವಿಸಿದ ಹಿಂಸೆ-ದೌರ್ಜನ್ಯಗಳನ್ನು ವಿವರಿಸಿರಿ.